ಇನ್ನು ಓಟೆಡ್ ಗ್ರಾಂಟ್ಸಿನಲ್ಲಿ 1950-51ಕ್ಕೆ —18·3. 1951-52ಕ್ಕೆ —37·1 ಮತ್ತು 1952-53ಕ್ಕೆ —22·1 ಅಂತ ತೋರಿಸಿದ್ದಾರೆ. ಹೀಗೆ ಪ್ರತಿ ವರ್ಷವೂ ಸೇವಿಂಗ್ಸ್ ಬಾಬಿನಲ್ಲಿ ಜಾಸ್ತಿಯಾಗುತ್ತಿದೆ. ಆದರೆ ಹೀಗೆ ಸರ್ಕಾರದವರು ಈ ಸಪ್ಲಿಮೆಂಟರಿ ಗ್ರಾಂಟ್ಸ್‌ಗಳನ್ನು ಕೇಳುವುದರಲ್ಲಿ ಏನೂ ಒಂದು ರೀತಿ ನೀತಿ ಇರಬೇಡವೇ ?

ಇನ್ನು ಎರಡನೆಯ ವಿಚಾರವೇನೆಂದರೆ—ಈ ಅಪ್ರೋಪ್ರಿಯೇಷನ್ ಬಗ್ಗೆ ಪ್ರಸಕ್ತ ಸಾಲಿನ ಅಕೌಂಟ್ಸ್‌ಗಳ ಬಗ್ಗೆ ಪುಟ 9ರಲ್ಲಿ 12ನೆಯ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ; "It will be seen from paragraph 28 and the notes under the various grants that such control of expenditure was practically non-existent in most of the departments." ಹೀಗೆ ಈ ಖರ್ಚು ಬಾಬುಗಳ ಮೇಲೆ ಅಂಥ ಒಂದು ವಿಚಕ್ಷಣೆ ಅಥವಾ ದಕ್ಷತೆ ಇತ್ಯಾದಿ ಯಾವುದೂ ಇದ್ದ ಹಾಗೆ ಕಂಡುಬರುವುದಿಲ್ಲ ಎಂಬುದಾಗಿ ಅಕೌಂಟೆಂಟ್ ಜನರಲ್‌ರವರೇ ಹೇಳಿದ್ದಾರೆ. ಆದಕಾರಣ ಹೀಗೆ ಈ ಸಪ್ಲಿಮೆಂಟರಿ ಗ್ರಾಂಟ್ಸ್‌ಗಳನ್ನು ಕೇಳುವಾಗ ವಾಸ್ತವಾಂಶದ ಬಗ್ಗೆ ಅಂಕೀ ಅಂಶಗಳನ್ನೇ ನೋಡದೆ ಸಿಕ್ಕಿದಂತೆಲ್ಲಾ ಕೇಳುತ್ತಿದ್ದಾರೆಂದು ಹೇಳಿದರೆ ಅದೇನೂ ಅಷ್ಟು ತಪ್ಪಾಗಲಾರದು. ಈ ಸಂಬಂಧನಾಗಿ ಅನೇಕ ಅಬ್‌ಜೆಕ್ಷನ್‌ಗಳನ್ನು ಆಡಿಟ್ ಇಲಾಖೆಯಿಂದ ಫೈನಾನ್ಸ್ ಇಲಾಖೆಗೆ ಕೇಳಿದ್ದಾರೆ. ಆದರೆ ಕೆಲಕೆಲವು ಅಬ್‌ಜೆಕ್ಷನ್‌ಗಳು 1949ರಿಂದಲೂ ಫೈಸಲಾಗದೆ ಇನ್ನೂ ಹಾಗೆಯೇ ಉಳಿದಿರುತ್ತವೆಂಬುದನ್ನು ನೋಡಿದರೆ ನನಗಂತೂ ಬಹಳ ಖೇದವಾಗುತ್ತದೆ. 17ನೆಯ ಪುಟದಲ್ಲಿ. . . .

Sri K. HANUMANTHAIYA.—You will discuss that report separately.

ಶ್ರೀ ಟಿ. ಸಿ. ಬಸಪ್ಪ.—ಕೆಲವು ವಿನಾಯಿತಿಗಳು ಇರಬಹುದು. ಆದರೂ ಅಷ್ಟಾಗಿ ಈ ಲೆಕ್ಕಪತ್ರಗಳ ಮೇಲೆ ಕಂಟ್ರೋಲ್ ಇಲ್ಲದಿರುವುದರಿಂದಲೇ ಈ ಇಲಾಖೆಗಳ ಅಂಕೀ ಅಂಶಗಳು ರಿಕನ್‌ಸೈಲ್ ಮಾಡುವುದಕ್ಕೆ ಸಿಕ್ಕುತ್ತಿಲ್ಲ. Reconciliation ಮತ್ತು expenditure control ಇಲ್ಲದೆ ಈ ರೀತಿ Appropriation Bill ಬರುತ್ತದೆ ಎಂದು ಮಾತ್ರ ಹೇಳಬಲ್ಲೆ.

Mr. SPEAKER.— This is not the first time that we are discussing an appropriation Bill. It is not as though reasons are not forthcoming. The reasons are there for the discrepancies and to quote from them or to draw inferences in regard to the subject on hand would not be appropriate. The Member has to discuss the demands that are before the House.

ಶ್ರೀ ಟಿ. ಸಿ. ಬಸಪ್ಪ.—ನನ್ನ ಅಭಿಪ್ರಾಯವನ್ನು ಸರ್ಕಾರದವರು ಅರಿತಹಾಗೆ ಕಾಣುವುದಿಲ್ಲ. Appropriation Bills ಬರಬೇಕಾದರೆ ಅವರು ಐಂದು ರೀತಿನೀತಿಯನ್ನು ಅನುಸರಿಸಬೇಕು. I think I may quote one or two sentences about it also. Appropriations ಮಾಡುವ ವಿಚಾರದಲ್ಲಿ ಯಾವಾಗಲೂ ಸಹ ಇಲಾಖೆಗಳಿಗೆ ಖರ್ಚು ಎಷ್ಟು ಬೇಕೆಂದು ಸರಿಯಾದ ಖರ್ಚು ಬಾಬುಗಳನ್ನು ನೋಡಿಕೊಂಡು ಕೇಳಬೇಕು. ಪ್ರತಿವರ್ಷವೂ Appropriationಗಿಂತ ಉಳಿತಾಯಗಳೇ ಜಾಸ್ತಿಯಾಗುತ್ತಿದ್ದರೆ Appropriation ಪಡೆಯುವ ಕಾರಣವಾದರೂ ಏನು? ಕಾಲವೂ ಸಹ ವ್ಯರ್ಥವಲ್ಲವೇ?

ಇನ್ನು Appropriation Billನ ವಿಚಾರದಲ್ಲಿ ನೇರವಾಗಿ ಒಂದೆರಡು ಅಂಶಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಅರಣ್ಯ ಇಲಾಖೆಯ ವಿಚಾರದಲ್ಲಿ ಅನೇಕ ಸೂಚನೆಗಳನ್ನೂ cut-motionsಗಳನ್ನೂ ಈ ಸಭೆಯಲ್ಲಿ ಅನೇಕ ಸಾರಿ ತಂದಿದ್ದೇನೆ. ಹೋದ ಸಾರಿ ಈ ವಿಚಾರವನ್ನು ಸಭೆಯ ಗಮನಕ್ಕೆ ತಂದಾಗ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಪುನಃ ನೋಡುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ನಿನ್ನೆದಿನ ಸಹ ಈ ಅಧಿವೇಶನದಲ್ಲಿ ಈ ವಿಚಾರ ಚರ್ಚೆಗೆ ಬಂದಾಗ ಇದನ್ನು ಕೂಲಂಕಷವಾಗಿ ವಿಚಾರ ಮಾಡಿ ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವೊತ್ತಿನ ವರೆಗೂ ಇದರ ಬಗ್ಗೆ ಏತಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲವೋ ನನಗೆ ಗೊತ್ತಾಗುವುದಿಲ್ಲ. ಕಾಡಿನಿಂದ ಅಥವಾ ಡಿಪೋ

ಗಳಿಂದ ಮರಗಳನ್ನು ಡಿಪೋಗಳಿಗೆ ಹೇರಿಸಬೇಕಾದರೆ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಟೆಂಡರು ಮೂಲಕವೇ ಅವುಗಳನ್ನು ವಿಲೇವಾರಿ ಮಾಡಿ ಕೆಲಸ ಮಾಡಿಸಬೇಕು. ಯಾವ ಕಾರಣದಿಂದಲೂ ತಮಗೆ ಬೇಕಾದವರಿಗೆ ಬೇಕಾದ rateನಂತೆ ಕೊಡುವ ನೀತಿ ತಪ್ಪು. ಅದು discrimination ಮಾಡಿದಂತಾಗುತ್ತದೆ. ಅದರಿಂದ ಸರ್ಕಾರಕ್ಕೂ ನಷ್ಟ. ಜನರ ಮನಸ್ಸಿನಲ್ಲಿ ಅನುಮಾನಕ್ಕೂ ಕಾರಣವಾಗುತ್ತದೆ. ಏತಕ್ಕೆ ಈ ನೀತಿಯನ್ನು ಅನುಸರಿಸುತ್ತಾರೋ ಗೊತ್ತಾಗಲಿಲ್ಲ. ಎಷ್ಟೋ ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಪುನಃ ಒಂದು ಉದಾಹರಣೆ ಹೇಳುತ್ತೇನೆ. 30 ಮೈಲಿಗೆ ಟೆಂಡರು ಮೂಲಕ $10\frac{1}{2}$ ಆಣೆ ಇದ್ದರೆ 20-25 ಮೈಲಿಗಳಿಗೆ ಅಮಾನಿ ಮೂಲಕ ಒಂದು ರೂಪಾಯಿ ಕೊಟ್ಟಿದ್ದಾರೆ. ಏತಕ್ಕೆ ಸ್ವಾಮಿ ಇಬ್ಬರು ಮೂವರು ಕಂಟ್ರಾಕ್ಟರುಗಳಿಗೆ ಅಮಾನಿ ದರ ಕೊಡುವುದು ಮತ್ತು ಬಾಕಿಯವರಿಗೆ ಕೊಡದೇ ಇರುವುದು ? ಟೆಂಡರು ಮೂಲಕ ವಿಲೇ ಮಾಡಿದ ಪಕ್ಷದಲ್ಲಿ ಅದರಿಂದ ಯಾರಿಗೂ ಅಭ್ಯಂತರವಿಲ್ಲ. ಅದನ್ನು ಅನುಸರಿಸಬೇಕೆಂದು ಒತ್ತಾಯ ಮಾಡಿ ಹೇಳಬೇಕಾಗಿದೆ. ಎರಡನೆಯದು ಶ್ರೀ ವಾರ್ಕ್ ಶ್ರೀನಿವಾಸಯ್ಯಂಗಾರ್‌ರವರು ವಿಧಾನ ಸೌಧ, ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿಯವರಿಗೆ ಕೊಡುವ ತೇಗದ ಮರಗಳನ್ನು ಅಡಿ 1 ಕ್ಕೆ 10 ರೂಪಾಯಿಗಳಂತೆ ಕೊಡಲು ನಿಗದಿ ಮಾಡಿದ್ದಾರೆ ಎಂಬ ವಿಚಾರ ಪ್ರಸ್ತಾಪ ಮಾಡಿದರು. ಮರ supply ಮಾಡುವ ವಿಚಾರದಲ್ಲಿ ಇವತ್ತು ಸೊಗಸಾದ ಅತ್ಯಂತ ಉತ್ತಮವಾದ ಮರಗಳನ್ನು ಸೆಲೆಕ್ಟ್ ಮಾಡಿ ಹಿಂದೂಸ್ಥಾನ್ ಏರ್‌ಕ್ರಾಪ್ಟ್ ಫ್ಯಾಕ್ಟರಿಗೆ ಮತ್ತು ವಿಧಾನ ಸೌಧಕ್ಕೆ ಕಳುಹಿಸುತ್ತಿದ್ದಾರೆ. ಅದಕ್ಕಿಂತ inferior quality ಮರುಗಳ ಡಿಪೋ ಹರಾಜಿನಲ್ಲಿ 14-15 ರೂಪಾಯಿಗಳವರೆಗೂ ಹೋಗುತ್ತವೆ. ಆದರೆ ವಿಧಾನಸೌಧಕ್ಕೋ ಹಿಂದೂಸ್ಥಾನ್ ಏರ್‌ಕ್ರಾಪ್ಟಿಗೋ ಕೊಡುವ ಮರಗಳನ್ನು ಹರಾಜು ಹಾಕಿದರೆ, 17-18 ರೂಪಾಯಿಗಳಿಗೆ ಕಡಿಮೆ ಬರುವುದಿಲ್ಲ. ಅಂಥಾದ್ದನ್ನು select ಮಾಡಬಾರದು ಎಂದು ಹೇಳುವುದಿಲ್ಲ. ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದಹಾಗೆ market rate ಏನು ಇದೆಯೋ ಆ ರೀತಿ ನಿಗದಿ ಮಾಡುವುದು ನ್ಯಾಯವೆಂದು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸಿವಿಲ್ ವರ್ಕ್ಸ್ ವಿಚಾರದಲ್ಲಿ ಎಷ್ಟು ಹೇಳಿದರೂ ತೀರದು ಎನ್ನಿಸುತ್ತದೆ. ಉದಾಹರಣೆ ಕೊಟ್ಟು ಈ ಬಗ್ಗೆ ಸರಿಯಾದ ರೀತಿ ನೀತಿಗಳನ್ನು ಅನುಸರಿಸಬೇಕೆಂಬ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. P. W. D. ಇಲಾಖೆಯವರು ಯಾವ ಕೆಲಸ ಮಾಡಬೇಕಾದರೂ quotations ಕರೆಯುತ್ತಾರೆ. ಆ quotations ಎಂದರೆ ಏನೆಂದು ಅರ್ಥವಾಗುತ್ತಾ ಇರಲಿಲ್ಲ. ಇದರ ಒಳಹೊಕ್ಕು ನೋಡಿದ್ದರಲ್ಲಿ quotations ಏನು ಎಂದು ಅರ್ಥವಾಗುತ್ತದೆ. ಜಲ್ಲಿ supply ಮಾಡಬೇಕಾದರೆ local quotations ಕರೆಯುತ್ತಾರೆ. ಮೂರು ನಾಲ್ಕು quotations ಬಂದರೆ ಯಾವುದು ಕಡಿಮೆ ಇರುತ್ತದೆಯೋ ಆ ರೇಟಿನ ಪ್ರಕಾರ ಎಲ್ಲರಿಗೂ ಹಂಚುತ್ತಾರೆ. ಹಾಗಾದರೆ ಯಾರೂ ಕಡಮೆ ರೇಟ್ ಕೊಡುವುದಿಲ್ಲ. ಟೆಂಡರು ಕರೆದರೆ ಯಾರು ರೇಟ್ ಕಡಮೆ ಕೊಡುತ್ತಾರೋ ಅವರಿಗೇ ಕೊಡಿ. ಆ ರೀತಿ ಎಲ್ಲರೂ ಸಹ tender rateನ್ನು ಅನುಸರಿಸಬೇಕು, Tender ಮೂಲಕ ವಿಲೇವಾರಿ ಮಾಡಬೇಕು ಎಂದು ಹೇಳುತ್ತೇನೆ. ಕಡೂರಿನಿಂದ ತರೀಕೆರೆಗೆ 19 ಮೈಲಿಗಳಿಗೆ ಜಲ್ಲಿಯನ್ನು 12 ರೂಪಾಯಿಗಳಂತೆ supply ಮಾಡಿದ್ದಾರೆ. Quotation 14-15 ಮೈಲಿಗಳಿಗೆ 14-15 ರೂಪಾಯಿಗಳಂತೆ ಕೊಟ್ಟಿದ್ದಾರೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಇಲಾಖೆಯಲ್ಲಿ ನಿರ್ದಿಷ್ಟವಾದ ರೀತಿ ನೀತಿಗಳನ್ನು ಅನುಸರಿಸದೆ ಇದ್ದುದರಿಂದ ಇಲ್ಲಿ ಅನೇಕ ಲೋಪದೋಷಗಳೂ, ಸರ್ಕಾರಕ್ಕೆ ನಷ್ಟವೂ ಆಗಲಿಕ್ಕೆ ಅವಕಾಶವಾಗಿದೆ. ಆದ್ದರಿಂದ ಇಲ್ಲಿಯೂ ಕೂಡ ಟೆಂಡರು ಮುಖಾಂತರ ವಿಲೇವಾರಿ ಮಾಡಿದ ಪಕ್ಷದಲ್ಲಿ ಮತ್ತು ಒಂದು ನಿರ್ದಿಷ್ಟವಾದ ನೀತಿಯನ್ನು ಕಡ್ಡಾಯವಾಗಿ ಅನುಸರಿಸಿದ ಪಕ್ಷದಲ್ಲಿ ಸರ್ಕಾರಕ್ಕೂ ಅದರಿಂದ ಉಳಿತಾಯವಾಗುತ್ತದೆ ಮತ್ತು ಜನರಿಗೆ ಅನುಕೂಲವಾಗುತ್ತದೆ. ಅಲ್ಲದೆ ಜನಗಳ ಮನಸ್ಸಿಗೂ ತೃಪ್ತಿಯಾಗುತ್ತದೆ ಎಂದು ಹೇಳುತ್ತೇನೆ. ಸರಕಾರದವರು ಕೆಲವು ವೇಳೆ ರಸ್ತೆಗಳಿಗೆ ಜಲ್ಲಿ collect ಮಾಡುತ್ತಾರೆ. ಒಂದು ವರ್ಷ ಜಲ್ಲಿ collect ಮಾಡಿದರೆ, ಅದನ್ನು ಅಳತೆಮಾಡಿ ದುಡ್ಡು ಕೊಡುತ್ತಾರೆ. ಮುಂದಿನ ವರ್ಷ ಅದೇ ರಸ್ತೆಗೆ ಜಲ್ಲಿ collect ಮಾಡಬೇಕೆಂದರೆ ಕಂಟ್ರಾಕ್ಟರ್ಸ್ ಅದೇ ಜಲ್ಲಿಯನ್ನು ಪುನಃ ತೆಗೆದುಕೊಂಡು ಬೇರೆ ಕಡೆ ರಾಶಿಹಾಕಿ measurement ತೆಗೆದುಕೊಳ್ಳುವ ಅನೇಕ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ಇದಕ್ಕೆ ಸರಿಯಾದ stock accounts ಇಲ್ಲದೆ ಇರುವುದು ಬಹಳ ಶೋಚನೀಯ. ಇದನ್ನು ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವುದಕ್ಕೆ ಎಷ್ಟೋ ನ್ಯೂನತೆಗಳನ್ನು ಹೇಳುತ್ತಾರೆ. ಸರಕಾರದವರು ಈ ವಿಚಾರದಲ್ಲಿ ಸರಿಯಾದ ನೀತಿಯನ್ನು ಅನುಸರಿಸದೆ ಇದ್ದ ಪಕ್ಷದಲ್ಲಿ ದೇಶದಲ್ಲಿ ಅನ್ಯಾಯವಾಗುತ್ತದೆ. ಟೀಕೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾವ ಇಲಾಖೆಯಲ್ಲಿಯೇ ಆಗಲಿ ಕೆಲಸಗಳನ್ನು ಟೆಂಡರ್ ಮೂಲಕ ವಿಲೇವಾರಿ ಮಾಡಬೇಕು. ಸ್ಟಾಕುಗಳನ್ನು ಸರಿಯಾಗಿ ಇಟ್ಟುಕೊಳ್ಳುವ ನೀತಿಯನ್ನು ಅನುಸರಿಸಬೇಕೆಂದು ಹೇಳುತ್ತೇನೆ. ಇನ್ನು ಹೆಚ್ಚಿಗೆ ಹೇಳುವುದಿಲ್ಲ. Appropriation Bill ವಿಚಾರದಲ್ಲಿ ಯಾವುದಾದರೂ ನೀತಿಯನ್ನು ಅನುಸರಿಸಿ ಬಿಲ್ಲನ್ನು ತರಬೇಕು. ಬಾಕಿ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಸಮಜಾಯಿಷಿಕೊಡಬೇಕೆಂದು ಹೇಳುತ್ತೇನೆ.

Sri H. M. CHANNABASAPPA (Minister for Industries).—I would like to know whether you have verified that the supply is not from the very same quarry.

ಶ್ರೀ ಟಿ. ಸಿ. ಬಸಪ್ಪ.—18-20 ಮೈಲಿಗಳ ಲೀಡ್ ಇಟ್ಟುಕೊಂಡು ಟೆಂಡರ್ quotations ಕೊಡುತ್ತಾರೆ. Local Contractors ಪಕ್ಕ ಪಕ್ಕದ quarry ಯಲ್ಲಿಯೇ ತೆಗೆದುಕೊಂಡು ಹೋಗಿ 5-6 ಮೈಲಿಗಳ ಲೀಡ್‌ನಲ್ಲಿ supply ಮಾಡುತ್ತಾರೆ. ಇದನ್ನೆಲ್ಲಾ ಅವರ ಗಮನಕ್ಕೆ ತಂದಿದ್ದೇನೆ. ಸರ್ಕಾರಕ್ಕೆ ಬೇಕಾದರೆ ಈ ವಿಚಾರದಲ್ಲಿ ಒಂದು listನ್ನು ಮಾಡಿಕೊಡುತ್ತೇನೆ. ಇದನ್ನು ಕೂಡಲೆ examine ಮಾಡಿದರೆ, ಸರಕಾರಕ್ಕೆ ಉಳಿತಾಯ ಮತ್ತು ದೇಶಕ್ಕೆ ಒಳ್ಳೆಯದು ಎಂದು ಹೇಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ Appropriation ಮಸೂದೆಗೆ ಸಂಬಂಧಪಟ್ಟ ಹಾಗೆ ನಾವು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಕೆಲವು ಡಿಮ್ಯಾಂಡ್‌ಗಳ ಬಗ್ಗೆ ಕೆಲವು

(ಶ್ರೀ ಎಸ್. ಗೋಪಾಲಗೌಡ.)

ಅಂಶಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ಇದ್ದೇನೆ. ಈ ಭೂದಾನ-ವಿದ್ಯಾದಾನ ಚಳವಳಿ ನಡೆದು ಸರಕಾರಕ್ಕೆ ಬಂದಿರತಕ್ಕ ಭೂಮಿಯನ್ನು ಕೃಷಿಗೆ ಯೋಗ್ಯವಾಗಿ ಮಾಡುವುದಕ್ಕೂ, ಮತ್ತು ವಿದ್ಯಾರ್ಥಿಗಳಿಗೆ ಬೇಕಾಗಬಹುದಾದ ಸಲಕರಣೆಗಳು, ಬೀಜಗಳು ಇತ್ಯಾದಿಗಳನ್ನು ಕೊಡಿಸುವುದಕ್ಕೋಸ್ಕರ ನಾವು ವಿದ್ಯಾ ಇಲಾಖೆಯವರಿಗೆ 1½ ಲಕ್ಷ ರೂಪಾಯಿಗಳಷ್ಟು advance money ಕೊಡಬೇಕು ಎಂದು explanatory noteನಲ್ಲಿ ತಿಳಿಸಿದ್ದಾರೆ. ಆದರೆ ಅರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ನಾನು ಈಚೆಗೆ ಒಂದು ಪತ್ರಿಕಾ ವರದಿಯನ್ನು ನೋಡಿದೆ. ಅದರಲ್ಲಿ ಸುಮಾರು 3½ ಲಕ್ಷ ರೂಪಾಯಿಗಳನ್ನು ಈಗಾಗಲೆ ಈ ವಿದ್ಯಾ ಸಂಸ್ಥೆಗೆ ಸರ್ಕಾರದವರು ಕೊಟ್ಟಿದ್ದಾರೆ ಎಂದು ಹೇಳಿದೆ. ನಿಜ. ಸರ್ಕಾರಕ್ಕೆ Contingent Fund ಮತ್ತು ಇತರ ಫಂಡುಗಳು ಇರುತ್ತವೆ. ಈ ಹಣವನ್ನು ಮುಂಗಡವಾಗಿ ಯಾವುದಾದರೂ ಒಂದು ಇಲಾಖೆಗೆ ಕೊಡಬಹುದು. ಅನಂತರ ಇರತಕ್ಕ ಅವಕಾಶವನ್ನು ಉಪಯೋಗಿಸಿಕೊಂಡು appropriate ಮಾಡಿ ಈ ಸಭೆಯ ಅಂಗೀಕಾರವನ್ನು ಪಡೆಯಬಹುದು. ಆದರೆ ನನ್ನ ವಿರೋಧ ಈ ವಿಷಯದಲ್ಲಿ ಏನೆಂದರೆ ಮುಖ್ಯವಾಗಿ ಮೊನ್ನೆ ತಾನೆ ಹೇಳಿದ ಹಾಗೆ ಇದು ಒಂದು ಯೋಜನಾ ರೂಪದಲ್ಲಿ ಇಲ್ಲ. ಇದು ಒಂದು ಆದರ್ಶವನ್ನು ಪೂರ್ತಿ ಮಾಡುವುದಕ್ಕಾಗಿ ಮಾಡಿರತಕ್ಕ ಪ್ರಯತ್ನವಾಗಿದೆ. ಕಾರ್ಯತಃ ಇದು ಅನೇಕ ತೊಡಕುಗಳಿಗೆ ಎಡೆ ಕೊಡುವ ಹಾಗೆ ಇದೆ. ಹಣ ಖರ್ಚು ಮಾಡುವುದಕ್ಕೆ ಮುಂಚೆ ಪೂರ್ವಭಾವಿಯಾಗಿ ಇದರಲ್ಲಿ ಎಷ್ಟು ಭೂಮಿ ಯಾವ ಯಾವ ಶಾಲಾ ಕಾಲೇಜಿಗೆ ಲಗತ್ತಾಗಿದೆ ಮತ್ತು ಉಳುಮೆಗೆ ಯೋಗ್ಯವಾಗಿದೆ, ಅದು ಸ್ಕೂಲ್ ವಿದ್ಯಾ ಇಲಾಖೆಯ ಸುಪರ್ದಿನಲ್ಲಿ ಇರುವುದಕ್ಕೆ ಲಾಯಕ್ಕಾಗಿದೆಯೋ ಎಂಬುದನ್ನು ಸರ್ವೆ ಮಾಡಿಸಿ ಯೋಗ್ಯವಾದುದನ್ನು ಮಾತ್ರ ಅಂತಹ ಶಾಲೆಗೆ ಇಟ್ಟುಕೊಳ್ಳುವ ಪ್ರಯತ್ನ ಮಾಡುವುದು ಬಹಳ ಕ್ಷೇಮ. ಇಲ್ಲದೇ ಹೋದರೆ ಸಾಮೂಹಿಕವಾಗಿ ಎಲ್ಲ ಸ್ಕೂಲುಗಳಿಗೂ ಇಷ್ಟಿಷ್ಟು ಹಣ ಎಂದು ಈ ರೀತಿ ಭತ್ತ ಕೊಂಡುಕೊಳ್ಳಲಿ, ಸಲಕರಣೆ ಕೊಂಡುಕೊಳ್ಳಲಿ ಎಂದು allotment ಮಾಡಿದರೆ ಅದರಿಂದ ಅನುಕೂಲವಾಗುವುದಿಲ್ಲ. ಸಾಮಾನ್ಯವಾಗಿ ಕೆಳಗೆ ಇರುವ ಅಧಿಕಾರಿಗಳಿಗೆ, ಭಯ ಇರುತ್ತದೆ. ಮುಖ್ಯ ಮಂತ್ರಿಗಳು ಆದಿಯಾಗಿ ಎಲ್ಲಾ ಮಂತ್ರಿಗಳೂ ಕಾಲ್ನಡಿಗೆಯಲ್ಲಿ ಪ್ರವಾಸ ಮಾಡಿದ್ದಾರೆ, ಜಿಲ್ಲಾಧಿಕಾರಿಗಳು, ದೊಡ್ಡ ದೊಡ್ಡ ಸ್ಟೇಟ್ ಅಧಿಕಾರಿಗಳು, ಇಂತಹ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಅದಕ್ಕೆ ಪ್ರಶಂಸೆ ಕೂಡ ಬಂದಿದೆ; ನಾವು ಸಹಕರಿಸಲಿಲ್ಲ ಎಂಬ ಅಪಾದನೆ ಮೇಲೆ ನಮಗೆ ಏನು ಶಿಕ್ಷೆ ಕೊಡುತ್ತಾರೋ ಎಂದು ಉಪಾಧ್ಯಾಯರು ಮತ್ತು ಸಂಬಂಧಪಟ್ಟ ಇಲಾಖೆಯವರು ಭಯದಿಂದ ಕನಿಷ್ಠಪಕ್ಷ ಖರ್ಚನ್ನಾದರೂ ತೋರಿಸಬೇಕಾಗುತ್ತದೆ. ಇದನ್ನು ideal ಆಗಿ ಮಾಡಬೇಕಾಗಿದೆ. ಇದರ ಪರಿಣಾಮ ಏನೇ ಇರಲಿ ನಾನು ಚಳವಳಿಯನ್ನು ಆರಂಭ ಮಾಡಿರುವುದು ತಪ್ಪು ಎಂದು ಹೇಳುವುದಿಲ್ಲ. ಮೊದಲೇ ಹೇಳಿದಹಾಗೆ ಅದು ಒಂದು ಆದರ್ಶ. ಈ ರೀತಿ ಪ್ರಯತ್ನ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಆದರೆ ವಾಸ್ತವಿಕಾಂಶಗಳನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಅದು ಯೋಜನಾಬದ್ಧವಾಗಿರಬೇಕು. ಇವೊತ್ತು ನಮಗೆ ರಾಷ್ಟ್ರವನ್ನು ಕಟ್ಟುವುದಕ್ಕೆ ಹಣ ಬೇಕು. ಖಾಸಗಿಯಾಗಿ ಕೋಟಿಗಟ್ಟಲೆ ಸಾಲವನ್ನು ಎತ್ತುತ್ತಿದ್ದೇವೆ. ಈ ರೀತಿ ಸಾಲವನ್ನು ಎತ್ತುವುದು ತಪ್ಪೆಂದು ಹೇಳುವುದಿಲ್ಲ. ಹೀಗೆ ಎತ್ತಿದ ಸಾಲದಿಂದ ಯೋಜನಾಬದ್ಧವಾಗಿ ಪ್ರತಿಯೊಂದು ಕಾಸನ್ನೂ ಉಪಯುಕ್ತವಾದ ರೀತಿಯಲ್ಲಿ ವಿನಿಯೋಗಿಸಬೇಕು. ಆದ್ದರಿಂದ ಯಾರೂ ಈ ರೀತಿ ಸಾಲವನ್ನು ತೆಗೆದುಕೊಂಡು ಖರ್ಚುಮಾಡುವುದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಏನಾಗಿದೆ ಎಂದರೆ ಅನೇಕ ಕಾರಣಗಳಿಗಾಗಿ ಭೂಮಿಯನ್ನು ದಾನವಾಗಿ ಕೊಟ್ಟಿರುತ್ತಾರೆ. ಅವೆಲ್ಲವೂ ನಮಗೆ ಉಪಯೋಗಕ್ಕೆ ಬರುತ್ತವೆಯೇ? ಸರಿಯಾದ ಭೂಮಿಯೇ? ಎಂಬುದನ್ನು ಮೊದಲು ನೋಡಬೇಕು. ಇದನ್ನು ಬಿಟ್ಟು ನಾವು ತಕ್ಷಣ ಅದಕ್ಕೆ ಹಣವನ್ನು ಒದಗಿಸಿಕೊಡಬೇಕು, ಕೃಷಿ ಮಾಡುವ ಪ್ರಯತ್ನವನ್ನು ನಡೆಸಬೇಕು ಎನ್ನುವ ಅಭಿಪ್ರಾಯ ಮಾತ್ರ ಸಮಂಜಸವಾದುದಲ್ಲ ಎಂದು ಹೇಳುತ್ತೇನೆ.

2-30 P.M.

ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಯವರಿಗೆ ಈಗ ಮೂರೂವರೆ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳ ಭಾಷಣದಲ್ಲಿ ಇದನ್ನು ಪೂರ್ತಿಯಾಗಿ ಎಲ್ಲವನ್ನೂ ಖರ್ಚುಮಾಡುವುದಿಲ್ಲ, ಅಗತ್ಯಬಿದ್ದರೆ ಮಾಡುತ್ತಾರೆ, ಇಲ್ಲದಿದ್ದರೆ ಉಳಿದುದನ್ನು ವಾಪಸು ಮಾಡುತ್ತಾರೆಂದು ಹೇಳಿದ್ದಾರೆ. ಆದುದರಿಂದ ಈ ಸಭೆಯ ಮೂಲಕ ಮೊದಲೇ ಸರ್ಕಾರಕ್ಕೆ ಒಂದು ಸಣ್ಣ ಎಚ್ಚರಿಕೆಯ ರೂಪದಲ್ಲಿ ನಾನು ಹೇಳುವುದೇನೆಂದರೆ, ಇಷ್ಟು ದೊಡ್ಡ ಹಣ—ಮೂರುವರೆ ಲಕ್ಷ ರೂಪಾಯಿ—ಖರ್ಚಾಗಿ, ಉದ್ದೇಶವೂ ಈಡೇರದೆ ಹೋಗಬಹುದೆಂಬ ಶಂಕೆಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಇಲ್ಲಿ ಒಂದೂವರೆ ಲಕ್ಷ ಇರುವುದು, ಭಾಷಣದಲ್ಲಿ ಎರಡು ಲಕ್ಷ ಇರುವುದು, ಕೊಡುವುದು ಮೂರುವರೆ ಲಕ್ಷ, ಹೀಗಾದರೆ ಇದು ಸಮಂಜಸವಲ್ಲವೆಂದು ಹೇಳುತ್ತೇನೆ.

ಇನ್ನೊಂದು, ನೀತಿಗೆ ಸಂಬಂಧಪಟ್ಟ ವಿಷಯ. ಕೆರೆಗಳ ಸಂಬಂಧದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಬೇಲೂರು ತಾಲ್ಲೂಕಿನ ಕೆರೆಗಳ ಜೀರ್ಣೋದ್ಧಾರಕ್ಕೆಂದು ಕೊಡಲಾಗಿದೆ. ಮೊನ್ನೆ ತಾನೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಆಮೇಲೆ ಈ ರೀತಿಯಾಗಿದೆಯೆಂದು ಕಂದಾಯ ಮಂತ್ರಿಗಳು ಸಭೆಗೆ ವಿವರಣೆ ಕೊಟ್ಟರು. ಇದರಲ್ಲೊಂದು ನೀತಿ ಅಡಕವಾಗಿದೆ. ಮಾನ್ಯ ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರ ಕರೆಗಳನ್ನು ಮನ್ನಿಸಿ ಬೇರೆ ಬೇರೆ ಊರುಗಳಿಗೆ, ಸಂಸ್ಥೆಗಳಿಗೆ, ಸ್ಥಳಗಳಿಗೆ ಭೇಟಿಕೊಡುವುದು, ಅಲ್ಲಿ ಬಿನ್ನವತ್ತಳೆಗಳನ್ನು ಪಡೆಯುವುದು, ಅದಕ್ಕೆ ಉತ್ತರಗಳನ್ನು ಕೊಡುವುದು ಸಂಪ್ರದಾಯವಾಗಿ ನಡೆದುಕೊಂಡು ಬಂದಿದೆ. ಈ ರೀತಿ ಮಾಡುವಾಗ ಕೆಲವು ಸಂದರ್ಭಗಳಲ್ಲಿ, ನನಗೆ ಗೊತ್ತಿರುವ ಹಾಗೆ, ಕೆಲವರಿಗೆ ಈ ರೀತಿ ಮಂತ್ರಿಗಳನ್ನು ಕರೆಯುವುದು, ಉಪಚಾರ ಮಾಡುವುದು, ಅವರ ಮೂಲಕ ತಮಗೆ ಬೇಕಾದ ಕೆಲಸಗಳನ್ನು ಸಾಧಿಸಿ ಕೊಳ್ಳುವುದು ರೂಢಿಯಾಗಿದೆ. ಇದರಲ್ಲಿ ಅವರು ನಿಷ್ಣಾತರಾಗಿರುತ್ತಾರೆ. ಇದು ತಪ್ಪೇನೂ ಅಲ್ಲ. ಸರ್ಕಾರದಿಂದ ಏನಾದರೂ ಅನುಕೂಲ ಪಡೆಯಬೇಕೆಂದು ಆಶೆ ಇರುತ್ತದೆ.

ಶ್ರೀ ಕೆ. ಹನುಮಂತಯ್ಯ.—ಬೋರಣ್ಣಗೌಡರು ಆರೀತಿ ಏನೂ ಕೊಟ್ಟಿಲ್ಲ.

ಶ್ರೀ ಎಸ್. ಗೋಪಾಲಗೌಡ.—ವಾಗ್ದಾನವನ್ನು ಮಾಡುವುದು ಸುಲಭ, ಆದರೆ ಅದನ್ನು ಈಡೇರಿಸುವುದು

ತಮ್ಮ ಮುಂದೆ ಬಂದಾಗ ಎಷ್ಟು ಕಷ್ಟವಾಗುತ್ತದ ಎಂಬುದನ್ನು ಹೇಳುತ್ತೇನೆ. ಈ ರೀತಿ ಬಿನ್ನವತ್ತಳೆ ಕೊಡುವಾಗ ಅದರಲ್ಲಿ ಏನಾದರೂ ಬೇಡಿಕೆಯನ್ನು ಇಟ್ಟಿರುತ್ತಾರೆ. ಯಾವ ಊರಿಗೆ ಹೋದರೂ ಅಲ್ಲಿ ಬೇಡಿಕೆಯಿಲ್ಲದೆ ಇರುವುದಿಲ್ಲ. ಉದಾಹರಣೆಗೆ ಸಾಮಾನ್ಯವಾಗಿ ಒಂದು ಊರಿಗೆ ಹೋದರೆ ಆ ಊರಿನಲ್ಲಿ ಬಾವಿಗೆ ಅಷ್ಟು ಆವಶ್ಯಕತೆಯಿರುವುದಿಲ್ಲ. ಹೀಗಿದ್ದರೂ ಬಾವಿ, ಸ್ಕೂಲು, ಕಟ್ಟಡ—ಇವುಗಳು ಬೇಕೆಂಬ ಬೇಡಿಕೆ ಇರುತ್ತದೆ. ಅದರಲ್ಲಿಯೂ ಒಳ್ಳೆಯ ವಾಚಾಳಿಗಳಿದ್ದರೆ, ಮಂತ್ರಿಗಳ ಮನಸ್ಸಿಗೆ ಹೆಚ್ಚು ಸಂತೋಷವನ್ನುಂಟು ಮಾಡುವ ರೀತಿಯಲ್ಲಿ ವರ್ತಿಸಿ ಅವರ ಮನವನ್ನೊಲಿಸಿಕೊಳ್ಳುತ್ತಾರೆ. ಒಳ್ಳೆಯ ಭಾಷಣ ಮಾಡುವವರಿದ್ದರೆ ನಮ್ಮ ಮನಸ್ಸಿಗೆ ಸಂತೋಷವಾಗುವುದು ಸ್ವಾಭಾವಿಕ. ಹೀಗಿರುವಾಗ ಅಂಥ ಸಂದರ್ಭದಲ್ಲಿ ಸಾವಿರಾರು ಜನರು ಸೇರಿರುವಾಗ, ಮಂತ್ರಿಗಳು ಮನುಷ್ಯ ಸಾಮಾನ್ಯರು, ಅವರಿಗೂ ಹೀಗಾಗುವುದು ಸಹಜ. ಪ್ರಜಾಪ್ರಭುತ್ವ, ಅವರು ಕೊಟ್ಟಿರತಕ್ಕ ಓಟುಗಳಿಂದಲೇ ಅಧಿಕಾರಕ್ಕೆ ಬಂದಿರುವುದರಿಂದ ಅವರು ಇಡುವ ಬೇಡಿಕೆಗಳ ವಿಷಯದಲ್ಲಿ ಆಗುವುದಿಲ್ಲವೆಂದು ಹೇಳುವುದಕ್ಕೆ ಹೇಗಾಗುತ್ತದೆ? ಮಾಡಿ ಕೊಡುತ್ತೇವೆ ಎಂದು ಉಪಚಾರಕ್ಕಾದರೂ ಹೇಳಬೇಕಾಗುತ್ತದೆ. ಆಮೇಲೆ ಆ ಕೆಲಸಗಳನ್ನು ಈಡೇರಿಸಿ ಕೊಡಬೇಕಾಗುತ್ತದೆ, ಮಂತ್ರಿಗಳು ಹಿಂದಿಗಿಂತ ಇಂದು ಹೆಚ್ಚಾಗಿ ಸಾಮಾನ್ಯ ಜನಸಂಪರ್ಕವನ್ನಿಟ್ಟುಕೊಂಡಿರುವುದರಿಂದ ಇವರನ್ನು ಜನ ಸುಲಭವಾಗಿ ನೋಡಬಹುದು. ಹೀಗೆ ಮಂತ್ರಿಗಳ ಮುಂದೆ ಬೇಡಿಕೆಗಳು ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಅಷ್ಟು ಹಣವನ್ನು ಖರ್ಚು ಮಾಡುವುದಕ್ಕಾಗುತ್ತದೆಯೋ ಇಲ್ಲವೋ ಎನ್ನುವುದು ಕೂಡ ಹೊಳೆಯುವುದಿಲ್ಲ. ಉದಾಹರಣೆಗೆ, ಈಗ ಮಂತ್ರಿಗಳು ಹೇಳಿದ ಮೇಲೆ ಗೊತ್ತಾಯಿತು ಈ ಎರಡು ಲಕ್ಷ ರೂಪಾಯಿಗಳನ್ನು ಬೋರಣ್ಣನವರ ಬೇಡಿಕೆಯ ಪ್ರಕಾರ ಕೊಟ್ಟದ್ದೆಂಬುದು. ಯಾವಾಗಲೋ ಮಂತ್ರಿಗಳು ಪ್ರವಾಸ ಹೋದಹಾಗೂ, ಅಲ್ಲಿ ಅವರು ಕೇಳಿದಹಾಗೂ ಅದಕ್ಕೆ ಮಂತ್ರಿಗಳು ಮಾಡಿಸಿ ಕೊಡುತ್ತೇವೆಂದು ಹೇಳಿದಹಾಗೂ,—ಇನ್ನೇನು ಒಳಗೆ ಘರ್ಷಣೆ ನಡೆದಿರುತ್ತದೆಯೋ ಹೇಳುವುದಕ್ಕಾಗುವುದಿಲ್ಲ,—ಈ ಸಂದರ್ಭವನ್ನುಪಯೋಗಿಸಿಕೊಂಡು ಹಣವನ್ನು ಕೊಟ್ಟಿದ್ದಾರೆ. ಅಂತೂ ಪ್ರಭಾವವನ್ನುಪಯೋಗಿಸಿ ಕೊಂಡು ಕೆಲಸ ಮಾಡಿಸಿಕೊಳ್ಳುವುದು ಒಂದು ರೀತಿ. ಇದಕ್ಕೂ ಅವಕಾಶ ಕೊಡಬಾರದು. ಎರಡು ಲಕ್ಷ ರೂಪಾಯಿ ಸಣ್ಣ ಹಣವೇನೂ ಅಲ್ಲ. ಕೋಟಿಗಟ್ಟಲೆ ಹಣದ ಮಾತನಾಡುವಾಗ ಇದು ಸಣ್ಣದು; ಆದರೆ ವೈಯಕ್ತಿಕವಾಗಿ ನೋಡಿದರೆ ಇದು ಬಹಳ ದೊಡ್ಡ ಹಣ. ಈ ನೀತಿಯನ್ನು ಸರ್ಕಾರದವರು ಸಾಧ್ಯವಾದಷ್ಟು ಕೈಬಿಡುವುದೊಳ್ಳೆಯದು. ಏಕೆಂದರೆ ಬಡ್ಜೆಟ್ಟನ್ನು ಮಾಡುವಾಗ ಕೂಲಂಕಷವಾಗಿ ವಿಚಾರ ಮಾಡುತ್ತೇವೆ. ಹಿಂದಿನ ವರ್ಷದಲ್ಲಿ ವಾಗ್ದಾನ ಮಾಡಿರುವುದು, ವಿಧಾನ ಸಭೆಯಲ್ಲಿ ಮತ್ತು ಹೊರಗೆ ವಾಗ್ದಾನ ಮಾಡಿರುವುದು, ಇವುಗಳಲ್ಲಿ ಸಮಂಜಸವಾದುದು ಯಾವುದು ಎಂಬುದನ್ನು ಯೋಚಿಸಿ, ಒಟ್ಟು ಸಂಸ್ಥಾನದ ಹಿತದೃಷ್ಟಿಯಿಂದ ಅತಿ ಮುಖ್ಯವಾದುವು ಅನಿವಾರ್ಯವಾದುವು ಯಾವ ಕೆಲಸಗಳೋ ಆ ಕೆಲಸಗಳಿಗೆ ಕೊಡಬೇಕಾಗುತ್ತದೆಯೇ ಹೊರತು ತಮ್ಮ ಅನುಕೂಲತೆಯನ್ನು ನೋಡಿಕೊಂಡು ಹಣಕಾಸಿನ ವಿಷಯದಲ್ಲಿ ವರ್ತಿಸುವುದು ಸಾಧ್ಯವಲ್ಲ, ಸಾಧುವೂ ಅಲ್ಲವೆಂದು ಈ ಸಮಯದಲ್ಲಿ ಹೇಳುತ್ತೇನೆ.

ಮೂರನೆಯದಾಗಿ, ಪೋರ್ಸೆಲೇನ್ ಕಾರ್ಖಾನೆಗೆ 15 ಲಕ್ಷ ರೂಪಾಯಿ ಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ಇದನ್ನು ಹೊಸದಾಗಿ ಕೇಳುವುದಿಲ್ಲ, ಹೋದವರ್ಷ ಕೊಟ್ಟದ್ದು ಲ್ಯಾಪ್ಸ್ ಆಯಿತು ಎಂದು ಹೇಳಿದರು. ಇದರಲ್ಲಿ ಬಹಳ ಅರ್ಥ ಕೂಡ ಇದೆ. ಏಕೆ ಲ್ಯಾಪ್ಸ್ ಆಯಿತು, ಏಕೆ ಉಪಯೋಗಿಸಲಿಲ್ಲ, ಯಾವ ರೀತಿಯ ಅಭಿವೃದ್ಧಿ ಕಾರ್ಯವನ್ನು ಅವರು ಕೈಗೊಂಡಿದ್ದರು, ಅದನ್ನು ಮಾಡದೇ ಇದ್ದುದಕ್ಕೆ ಕಾರಣವೇನು, ಇಂಥ ಅನೇಕ ವಿಷಯಗಳನ್ನು ಸರ್ಕಾರದವರು ಈ ಮಾನ್ಯ ಸಭೆಗೆ ತಿಳಿಸಬೇಕು. ಈಚೆಗೆ ಪತ್ರಿಕೆಗಳಲ್ಲಿಯೂ ಕೂಡ ನಾವು ನೋಡಿದ್ದೇವೆ, ಕೇಳಿದ್ದೇವೆ; ಈ ಕಾರ್ಖಾನೆಯ ಕೆಲಸ ತೃಪ್ತಿಕರವಾಗಿಲ್ಲ, ಸಮರ್ಪಕವಾಗಿಲ್ಲ, ಅಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲವೆಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಈ ಕಾರ್ಖಾನೆಯನ್ನು ಇಷ್ಟು ಹಣ ಖರ್ಚುಮಾಡಿ ಮೈಸೂರು ಸಂಸ್ಥಾನದಲ್ಲಿ ಯಾವ ಉದ್ದೇಶದಿಂದ ಸ್ಥಾಪನೆ ಮಾಡಿದೆವೋ, ಆ ಉದ್ದೇಶ ಇನ್ನೂ ಈಡೇರಿಲ್ಲ. ಬೇರೆ ಕಾರ್ಖಾನೆಗಳಲ್ಲಿ ಪೋರ್ಸೆಲೇನ್ ಕ್ರಾಕರಿ ಪದಾರ್ಥಗಳನ್ನು ತಯಾರು ಮಾಡುತ್ತಾರೆ. ಆ ಪದಾರ್ಥಗಳಿಗಿಂತ ಇಲ್ಲಿ ತಯಾರಾಗುವ ಪದಾರ್ಥಗಳು qualityಯಲ್ಲಿ ಕಡಮೆಯಾಗಿವೆ, ದರದಲ್ಲಿ ಹೆಚ್ಚಾಗಿವೆ. ತಜ್ಞರನ್ನುಪಯೋಗಿಸಿಕೊಂಡು ಬೇರೆ ಕಡೆ ಎಷ್ಟು ಸುಲಭ ದರದಲ್ಲಿ, ಕಡಮೆ ದರದಲ್ಲಿ, ಒಳ್ಳೆಯ ಸಾಮಾನುಗಳನ್ನು ಪಡೆಯಬಹುದೋ ಅಷ್ಟುಮಟ್ಟಿನ ಸಾಮಾನುಗಳನ್ನು ಸಕಾಲದಲ್ಲಿ ಕೊಡುವುದಿಲ್ಲ, ಇಷ್ಟು ಸಲಕರಣೆಗಳನ್ನಿಟ್ಟುಕೊಂಡಿದ್ದರೂ ಸರಿಯಾಗಿ ಜನರಿಗೆ ಇಲ್ಲಿ ತಯಾರಾಗುವ ಪದಾರ್ಥಗಳು ದೊರೆಯುತ್ತಿಲ್ಲವೆಂದು ಅನೇಕ ದೂರುಗಳು ನಮಗೆ ಬಂದಿವೆ, ಬರುತ್ತಿವೆ. ಇದೊಂದು ಒಳ್ಳೆಯ ಕೈಗಾರಿಕೆ; ಇದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನಿಸಬೇಕು. ಇಷ್ಟು ಭಾರಿ ಹಣವನ್ನು ಇದರಮೇಲೆ ಖರ್ಚು ಮಾಡುತ್ತಿರುವುದಕ್ಕೆ ತಕ್ಕಷ್ಟು ಇದರಿಂದ ಪ್ರತಿಫಲ ಬರಬೇಕು. ಕೈಗಾರಿಕೆ ಮಂತ್ರಿಗಳು, ಹೊಸದಾಗಿ ಕೈಗಾರಿಕೆಗಳನ್ನು ವಹಿಸಿಕೊಂಡಿರತಕ್ಕ ಶ್ರೀಮಾನ್ ಚನ್ನಬಸಪ್ಪನವರು ಪ್ರಾರಂಭದಲ್ಲಿ ಬಹಳ ಉತ್ಸಾಹವನ್ನು ತೋರಿಸಿದರು. ಅವರು ಭಾಷಣಗಳಲ್ಲಿ ಹೇಳುತ್ತಿದ್ದುದನ್ನೂ ಅವರ ಅತಿಯಾದ ಉತ್ಸಾಹವನ್ನೂ ನೋಡಿ, ಕೈಗಾರಿಕೆಗಳು ಮುಂದೆ ಬರುತ್ತವೆಯೋ ಅಥವಾ ಏನಾದರೂ ತೊಂದರೆಯಾಗುತ್ತದೆಯೋ ಎನ್ನುವ ಹೆದರಿಕೆ ನನಗಾಯಿತು! ಅಷ್ಟರಲ್ಲಿ ಅವರು ಭಾಷಣಗಳನ್ನು ನಿಲ್ಲಿಸಿದರು! ಅವರಿಗೆ ಉತ್ಸಾಹವಿದೆ. ಆದರೆ ಅಲ್ಲಿಗೇ ಅದು ಕರಗಿಹೋಗಿದೆ. ಕೈಗಾರಿಕೆ ಮಂತ್ರಿಗಳಿಬ್ಬರೂ ಒಂದೇ ಎಂದು ಭಾವಿಸಿದ್ದೇನೆ. ಈ ವಿಷಯಗಳಕಡೆ ತಾವು ಗಮನಕೊಡಬೇಕು. 15 ಲಕ್ಷ ರೂಪಾಯಿ ಏಕೆ ಲ್ಯಾಪ್ಸ್ ಆಯಿತು, ಪುನಃ 15 ಲಕ್ಷ ಏಕೆ ಕೊಡಬೇಕು, ಏನು ಸಲಹೆಗಳು ಬಂದಿವೆ, ಕಳೆದವರ್ಷ ಏಕೆ ಉಪಯೋಗಿಸಿ ಕೊಳ್ಳಲಿಲ್ಲ ಎಂಬ ಪ್ರಶ್ನೆಗಳನ್ನು ಕೇಳಿ, ಸಾಧ್ಯವಾದರೆ ಮಂತ್ರಿಗಳು ಈ ಕಾರ್ಖಾನೆಗೆ ಭೇಟಿ ಕೊಟ್ಟು ವಿಚಾರ ಮಾಡಬೇಕು. ನಾನು ಈ ಕಾರ್ಖಾನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ, ಅಥವಾ ಆದರ ಸಿಬ್ಬಂದಿಯವರು, ಕೆಲಸಗಾರರ ವಿಷಯದಲ್ಲಿ ವಿರೋಧವೇನೂ ಇಲ್ಲ, ಈ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಪತ್ರಿಕೆಗಳಲ್ಲಿ ಬರುತ್ತಿದೆ ಮತ್ತು ದೂರುಗಳನ್ನು ಕೇಳಿದ್ದೇನೆ, ಆದರಿಂದ ಹೇಳುತ್ತಿದ್ದೇನೆ. ಸಾಮಾನ್ಯವಾಗಿ ನಮಗೆ ಅನೇಕ ದೂರುಗಳು ಬರುತ್ತಿರುತ್ತವೆ. ಇವುಗಳಲ್ಲಿ ಕೆಲವು ಬುಡವಿಲ್ಲದ ಆಪಾದನೆಗೆ

(ಶ್ರೀ ಎಸ್. ಗೋಪಾಲಗೌಡ.)

ಇರುತ್ತವೆ. ಏನೋ ಅಸಕ್ತಿಯಿರುವ ಜನರು ಹಬ್ಬಿಸಿರುವ ವದಂತಿಗಳು ಇರುತ್ತವೆ. ಮತ್ತೆ ಕೆಲವು ಸಾರ್ವಜನಿಕ ಹಿತದೃಷ್ಟಿಯಿಂದ, ಕೈಗಾರಿಕೆ ಅಭಿವೃದ್ಧಿಯ ದೃಷ್ಟಿಯಿಂದ ಮಾಡಿರತಕ್ಕ ದೂರುಗಳೂ ಇರುತ್ತವೆ. ಇವು ಸತ್ಯವಾಗಿಯೂ ಇರುತ್ತವೆ. ಇಂಥವುಗಳನ್ನು ನಿಜವಾಗಿಯೂ ಪರಿಶೀಲನೆ ಮಾಡಬೇಕು. ಆದುದರಿಂದ ಈ ಪಿಂಗಾಣಿ ಕಾರ್ಖಾನೆಯ ವಿಷಯದಲ್ಲಿ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡು ಅಭಿವೃದ್ಧಿಯ ವಿಚಾರ ತೆಗೆದುಕೊಂಡರೆ, ಅಲ್ಲಿ ಕೆಲವು ರಸ್ತೆ ಮತ್ತು ಸೇತುವೆ ಕೆಲಸಗಳನ್ನು ಈಚೆಗೆ ಸರ್ಕಾರದವರು ಆರಂಭಮಾಡಿ, ಕೆಲವನ್ನು ಮುಗಿಸಿದ್ದಾರೆ, ಇನ್ನು ಕೆಲವು ಅರ್ಧದಲ್ಲಿ ನಿಂತಿವೆ. ಮತ್ತೆ ಕೆಲವು ರಸ್ತೆಗಳು ಮುಗಿದಿವೆ ಎಂದು ಹೇಳುವುದಕ್ಕಾಗುವುದಿಲ್ಲ, ಮುಗಿದಿಲ್ಲವೆಂತಲೂ ಹೇಳುವುದಕ್ಕಾಗುವುದಿಲ್ಲ; ಇಂಥ ಪರಿಸ್ಥಿತಿಯಲ್ಲಿವೆ. ಇವಕ್ಕೆ ಹಣ ಕಡಮೆ ಕೊಟ್ಟಿದ್ದರೆಂದು ಕಾಣುತ್ತದೆ. ಎಂದೂ ರಸ್ತೆಗಳಿಲ್ಲದಿರುವ ಕಡೆ ರಸ್ತೆಗಳನ್ನು ಮಾಡಿದ್ದಾರೆ. ಕೆಲವು ಕಡೆ ಕೇವಲ ಮಣ್ಣನ್ನೂ ಗಿಡಗಳನ್ನೂ ಕಡಿದು ರಸ್ತೆ ಮಾಡಿದ್ದಾರೆ. ಇವು ಬರಿಯ ದಾರಿಗಳು, ರಸ್ತೆಯಲ್ಲ. ಇವುಗಳಲ್ಲಿ ಮನುಷ್ಯರೂ ಗಾಡಿಗಳೂ ಹೋಗುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ಹೆಚ್ಚು ಮಳೆಯಿರುವುದರಿಂದ ಅಲ್ಲಿ ಬರಿಯ ಮಣ್ಣನ್ನು ಕಡಿದು ಜಾಡನ್ನು ಬಿಡಿಸಿದ ಮಾತ್ರಕ್ಕೇ ಅದು ರಸ್ತೆಯಾಗುವುದಿಲ್ಲ. ಅವುಗಳಲ್ಲಿ ಮುಖ್ಯವಾದ ಕೆಲವು ರಸ್ತೆಗಳನ್ನಾದರೂ ಸರ್ಕಾರದವರು ಆರಿಸಿಕೊಂಡು ಅವುಗಳಿಗೆ ಜಲ್ಲಿ ಕಲ್ಲು ಹಾಕದೇ ಹೋದರೆ ಈಗ ಖರ್ಚು ಮಾಡಿರುವ ಹಣದಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲಿ ಹಿಂದೆ ರಸ್ತೆಯಿರಲಿಲ್ಲವೆಂದು, ರಸ್ತೆ ಮಾಡಬೇಕೆಂದು ಜನರ ಬೇಡಿಕೆಯಿದ್ದು ಅದರ ಮೇಲೆ ಈಗ ರಸ್ತೆ ಮಾಡಿದಮಾತ್ರಕ್ಕೇ ಅದು ಪೂರೈಸಲಿಲ್ಲ. ಒಂದು ರಸ್ತೆಯನ್ನು ಮಾಡಿ ಒಂದು ವರ್ಷವಾಗಿದೆಯೆಂದಿಟ್ಟುಕೊಳ್ಳೋಣ. ಅಲ್ಲಿ ಮೋಟಾರು ಕಾರುಗಳು ಹೋಗುವುದು ಕಷ್ಟ. ಬೇರೆ ವಾಹನಗಳು ತಿರುಗಾಡುವುದೂ ಕಷ್ಟ. ಇಂಥ ಕೆಲವು ರಸ್ತೆಗಳಿಗೆ ಜಲ್ಲಿ ಹಾಕಿಸಬೇಕೆಂದು ನಾವು ಅನೇಕವೇಳೆ ಸೂಚನೆಗಳನ್ನು ಕೂಡ ಕೊಟ್ಟಿದ್ದೇವೆ. ಈಗಾಗಲೇ ಇವುಗಳ ಮೇಲೆ ಖರ್ಚು ಮಾಡಿರುವ ಹಣವನ್ನು ಉಳಿಸಿಕೊಳ್ಳುವುದಕ್ಕೆ ಇವುಗಳಿಗೆ ಜಲ್ಲಿ ಹಾಕಬೇಕು, ಅಲ್ಲದೆ ಮುಗಿಯದೆ ಅರ್ಧಾಂತಕವಾಗಿರುವ ಕೆಲವು ಕೆಲಸಗಳನ್ನೂ ಮುಗಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದ ಅವಗಾಹನೆಗೆ ತರುತ್ತೇನೆ. ಇನ್ನು ಕೆಲವು ಅಂದಾಜುಗಳನ್ನು ಉತ್ಸಾಹದಿಂದ ಸರ್ಕಾರದವರು ಮಾಡಿಸಿದರು. ಆದರೆ ಆಮೇಲೆ ಅದೇನು ಕಾರಣವೋ ಅಥವಾ ಹಣ ಕಾಸಿಲ್ಲದೇಯಿರುವ ಕಾರಣವೋ ಗೊತ್ತಿಲ್ಲ, ಅವುಗಳನ್ನು ಅಲ್ಲಿಗೇ ಕೈಬಿಟ್ಟು ಈಗ ಆ ಕೆಲಸ ಕಾರ್ಯಗಳನ್ನೆಲ್ಲಾ ಅಲ್ಲಿಗೇ ನಿಲ್ಲಿಸಿರುವಂತೆ ಕಾಣುತ್ತದೆ. ಮಲೆನಾಡು ಪ್ರದೇಶದಲ್ಲಿ ಮಲೆನಾಡಿಗೆ ಬಹಳ ಹಣವನ್ನು ಪಡೆದಿದ್ದೀರಿ, ಅಭಿವೃದ್ಧಿ ಯೋಜನೆಯಲ್ಲಿ ಬಹಳ ರಸ್ತೆಗಳು ಮತ್ತು ಸೇತುವೆಗಳಾಗಿವೆ ಎಂದು ಕೆಲವು ಮಿತ್ರರು ಹೇಳುತ್ತಿರುವುದನ್ನು ಕೇಳುತ್ತೇವೆ. ಈ ಮಾತಿನಲ್ಲಿ ಪೂರ್ಣವಾಗಿ ಸತ್ಯವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ರಸ್ತೆಗಳಿಲ್ಲದೇಯಿರುವ ರಸ್ತೆಗಳನ್ನೂ ಸಣ್ಣ ಸಣ್ಣ ಸೇತುವೆಗಳನ್ನೂ ಕಲ್‌ವರ್ಟುಗಳನ್ನೂ ಹೆಚ್ಚು ಹಣವನ್ನು ಖರ್ಚುಮಾಡಿ ಮಾಡಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಅವುಗಳ ಕೆಲಸ ಪೂರ್ತಿಯಾಗಿದೆಯೇ ಎಂದರೆ, ಪೂರ್ತಿಯಾಗಿಲ್ಲ. ಸುಮಾರು ನೂರು ಭಾಗ ಕೆಲಸವಿದ್ದರೆ ಅದರಲ್ಲಿ ಹತ್ತು ಭಾಗದಷ್ಟು ಕೆಲಸವನ್ನು ಪೂರೈಸಿರಬಹುದು. ಅದು ರಸ್ತೆಗಳೇ ಇಲ್ಲದಿರತಕ್ಕ ಪ್ರದೇಶ. ನಾನೇನೂ ಉತ್ಪ್ರೇಕ್ಷೆಮಾಡಿ ಹೇಳುತ್ತಿಲ್ಲ. ಕೆಲವು ದೊಡ್ಡ ಮಾರ್ಗಗಳನ್ನು ಬಿಟ್ಟರೆ, ಬಾಕಿಕಡೆ ಒಂದೂರಿನಿಂದ ಇನ್ನೊಂದೂರಿಗೆ ಹೋಗಬೇಕಾದರೆ ಮಧ್ಯೆ ಅನೇಕ ನದಿಗಳೂ ಹಳ್ಳಗಳೂ ಇದ್ದು ಸಂಚಾರಕ್ಕೆ ಬಹಳ ಅಡಚಣೆಗಳಿರುತ್ತವೆ. ಮತ್ತು ಆ ಪ್ರದೇಶದಲ್ಲಿ ಹೆಚ್ಚಾಗಿ ಮಳೆ ಇರುವುದರಿಂದ ಸಾಮಾನ್ಯವಾಗಿ ರಸ್ತೆಗಳನ್ನು ಸರಿಮಾಡಿಸಿದರೂ ಅವು ಮಳೆಗಾಲದಲ್ಲಿ ತಡೆಯುವುದಿಲ್ಲ. ಸರ್ಕಾರದವರೂ ಕೂಡ ಆ ರೀತಿ ರಸ್ತೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನೂ ಕೂಡ ಮಾಡಿಲ್ಲ.

ಆದ್ದರಿಂದ ಮಲೆನಾಡು ಪ್ರದೇಶಗಳ ಮುಖ್ಯ ಅವಶ್ಯಕತೆಯೇನೆಂದರೆ, ಅಲ್ಲಿ ಮನುಷ್ಯರ ಮತ್ತು ಜಾನುವಾರಗಳ ಓಡಾಟಕ್ಕೆ, ಆ ಪ್ರದೇಶಗಳು ಇತರ ನಾಗರಿಕ ಪ್ರದೇಶಗಳೊಡನೆ ಜೀವಂತ ಸಂಬಂಧವನ್ನಿಟ್ಟುಕೊಳ್ಳಬೇಕೆಂದರೆ ಅಲ್ಲಿ ಅಗತ್ಯವಾಗಿ ಸಣ್ಣ ಸಣ್ಣ ಸೇತುವೆಗಳನ್ನು ಮಾಡಿಕೊಡಬೇಕೆಂದು ನಾವು ಮೊದಲಿನಿಂದಲೂ ಒತ್ತಾಯ ಮಾಡುತ್ತಿದ್ದೇವೆ. ಅದಕ್ಕಾಗಿಯೇ ಮಲೆನಾಡಿಗೇ ಬೇರೆ ಒಂದು ಯೋಜನೆಯನ್ನು ಮಾಡಿ, ಅದನ್ನು ಕಾರ್ಯಗತಮಾಡಿ ಎಂದು ನಾವು ಆಗಾಗ್ಗೆ ಕೇಳುತ್ತಲೇ ಇದ್ದೇವೆ. ಯೋಜನೆ ಹಾಕಿಕೊಳ್ಳಬೇಕೆಂದು ಕೇಳುವುದರ ಉದ್ದೇಶ ಇಷ್ಟೆ. ಕೆಲವು ಸಂದರ್ಭದಲ್ಲಿ ತಮಗೆ ಸಂಬಂಧೀಕರು, ತಮಗೆ ಬೇಕಾದವರು ಎಂದು ಹೇಳಿ ಅವರ ಮನೆಗೆ ರಸ್ತೆ ಮಾಡಿಕೊಟ್ಟರು ಎಂದು ದೂರುಗಳು ಬರುತ್ತಿರುವುದಕ್ಕೆ ಅವಕಾಶವಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಯಾರದೋ ಶಿಫಾರಸ್ಸಿಗೆ ಒಳಗಾಗಿ ಯಾರೋ ಒಬ್ಬ ಸರ್ವೇಯರನ್ನು ಹಿಡಿದು ಎಸ್ಟಿಮೇಟ್ ಮಾಡಿ ಕಳುಹಿಸಿ ಕೊಟ್ಟಿರುತ್ತಾರೆ; ಸರ್ಕಾರದವರು ಗೊತ್ತಿಲ್ಲದೆ ಅದನ್ನು ಮಂಜೂರು ಮಾಡಿ ಬಿಡುತ್ತಾರೆ. ಕೊನೆಗೆ ಕೆಲಸವೆಲ್ಲಾ ಆದಮೇಲೆ ನೋಡಿದರೆ, ಆ ರಸ್ತೆ ಯಾವ ಹಳ್ಳಿಗೂ ಹೋಗದೆ ಯಾರದೋ ಮನೆಗೆ ಹೋಗುತ್ತಿರುತ್ತದೆ. ಆದ್ದರಿಂದ, ಇಂಥ ಪರಿಸ್ಥಿತಿಗಳನ್ನು ಯೋಚನೆಮಾಡಿ ಒಂದು ಸಣ್ಣ ಯೋಜನೆಯನ್ನು ತಯಾರುಮಾಡಿ ಅದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದರೆ ಇಂಥ ದೂರುಗಳಿಗೆ ಅವಕಾಶವಿರುವುದಿಲ್ಲ. ಇಲ್ಲದಿದ್ದರೆ ಯಾರು ಹೆಚ್ಚಿಗೆ ಒತ್ತಾಯ ತರುತ್ತಾರೆಯೋ ಅವರ ಕೆಲಸ ಮಾತ್ರ ಆಗುತ್ತದೆ. ಉಳಿದವರನ್ನು ಕೇಳುವುದೇ ಇಲ್ಲ; ಎಷ್ಟೋ ಅಗತ್ಯವಾದ ಸಾರ್ವಜನಿಕ ಉಪಯುಕ್ತ ಕಾರ್ಯವಾಗಿದ್ದರೂ ಅವು ನಡೆಯುವುದೇ ಇಲ್ಲ. ಆದ್ದರಿಂದ ಇಂಥ ಒಂದು ಯೋಜನೆಯನ್ನು ಮಾಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಮಸೂದೆಯಲ್ಲಿರುವ ಇನ್ನೊಂದು ಬಾಬು ಷೆಡ್ಯೂಲ್ಡ್ ಟ್ರೈಬ್‌ಗಳ ಅಭಿವೃದ್ಧಿಯ ವಿಷಯ. ರೂರಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಇದಕ್ಕಾಗಿ ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ. ಆ ಹಣಕ್ಕೆ ಮೈಸೂರು ಸರ್ಕಾರದವರೂ ಸ್ವಲ್ಪ ಹಣವನ್ನು ಕೂಡಿಸಿ ಒಂದು ನಿಧಿಯನ್ನು ಏರ್ಪಡಿಸುವುದಾಗಿ ತಿಳಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ 1951ನೆಯ ಇಸವಿಯಲ್ಲಿ ತೆಗೆದುಕೊಂಡ ಸೆನ್ಸಸ್ ಲೆಕ್ಕದ ಪ್ರಕಾರ ನಮ್ಮ ದೇಶದಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಪಂಗಡದವರು ಎಲ್ಲೆಲ್ಲಿ ವಾಸ ಮಾಡುತ್ತಿದ್ದಾರೆ, ಅವರ ಜೀವನ ಕ್ರಮವೇನು, ಅವರು ಯಾವ ಯಾವ ಕಸಬುಗಳನ್ನು ಅವಲಂಬಿಸುತ್ತಿದ್ದಾರೆ

ಎನ್ನುವ ವಿಷಯಗಳಲ್ಲಿ ಅಂಕಿಸಂಖ್ಯೆಗಳು ದೊರೆಯುತ್ತವೆ. ಅದನ್ನು ಉಪಯೋಗಿಸಿಕೊಂಡು ಸರ್ಕಾರದವರು ಒಂದು ಸಮಗ್ರವಾದ ಯೋಜನೆಯನ್ನು ಕೈಕೊಂಡು ಈ ಹಣವನ್ನು ವೆಚ್ಚ ಮಾಡತಕ್ಕದ್ದು ಸೂಕ್ತ ಮತ್ತು ಕ್ಷೇಮವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಈ ಹಣದಲ್ಲಿ, ಸಾಮಾನ್ಯವಾಗಿ ಮನೆಗಳನ್ನು ಕಟ್ಟುವುದಕ್ಕೆ ಮತ್ತು ಇತರ ಕೆಲಸಗಳಿಗೆ ಎಂದು ಹೇಳಿ ಹಣವನ್ನು ವೈಯಕ್ತಿಕವಾಗಿ ಕೆಲವರಿಗೆ ಕೊಡುವುದಿದೆ. ಇಂಥ ಸಂದರ್ಭದಲ್ಲಿ ನಾವು ಸರಿಯಾದ ರೀತಿ ನೀತಿಯನ್ನನುಸರಿಸದೆ ಇದ್ದರೆ, ಯಾರೋ ಹತ್ತು ಜನರನ್ನು ಹಿಡಿದು ಕೊಡುವುದು ಅಥವಾ ಯಾವುದೋ ಒಂದು ಊರನ್ನು ಆರಿಸಿಕೊಂಡು ಕೊಡುವುದು—ಈ ರೀತಿ ಆಗುವ ಸಂಭವವುಂಟು. ಅದಕ್ಕೋಸ್ಕರವೇ ಒಂದು ಯೋಜನೆಯನ್ನು ಇಟ್ಟುಕೊಂಡು ಅವರಿಗೆ ಯಾವ ರೀತಿ ಜಮೀನು ಕೊಡಬೇಕು, ಮನೆಗಳನ್ನು ಯಾವ ರೀತಿ ಕಟ್ಟಿಸಿಕೊಟ್ಟು ಹೇಗೆ ರಿಹ್ಯಾಬ್ಲಿಟೇಟ್ ಮಾಡಬೇಕೆಂಬ ವ್ಯವಸ್ಥೆಯನ್ನು ಕೈಕೊಳ್ಳಬೇಕಾಗಿದೆ. ನಾನಾಕಾರಣಗಳಿಗಾಗಿ ಅವರುಗಳು ನಾಗರಿಕ ಜನರ ಸಂಪರ್ಕದಿಂದ ದೂರವಾಗಿದ್ದಾರೆ. ಅವರಿಗೆ ನಾಗರಿಕ ಜನರೊಡನೆ ಯಾವ ಹವ್ಯಾಸವನ್ನಿಟ್ಟುಕೊಳ್ಳುವುದಕ್ಕೂ ಇಷ್ಟವಿರುವುದಿಲ್ಲ. ಆದ್ದರಿಂದ ಉಡಿಗೆ ತೊಡಿಗೆಗಳ ವಿಷಯದಲ್ಲಿಯಾಗಲಿ, ನಾಗರಿಕರ ಮಧ್ಯೆ ವಾಸಮಾಡುವಂತೆ ಮಾಡುವ ವಿಷಯದಲ್ಲಿಯಾಗಲಿ, ಹೊಸ ಆಚಾರ ವ್ಯವಹಾರಗಳನ್ನು ಅವರಲ್ಲಿ ಜಾರಿಗೆ ತರುವ ವಿಷಯದಲ್ಲಿಯಾಗಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದರೂ ಅವರು ಬಹುದೂರ ಸರಿಯುತ್ತಾರೆ. ಅದಕ್ಕೋಸ್ಕರ ಸರ್ಕಾರದವರು ಬೇರೊಂದು ಇಲಾಖೆಯನ್ನೇ ಏರ್ಪಡಿಸಿ ಆ ಮೂಲಕ ಕೆಲಸ ಮಾಡುತ್ತಾರೆಂದು ತಿಳಿದಿದ್ದೆ. ಆದರೆ ಇದುವರೆಗೂ ಅವರನ್ನು ತಕ್ಕಮಟ್ಟಿಗೆ ಒಟ್ಟುಗೂಡಿಸಿ ಅವರ ಸಂಪರ್ಕವನ್ನು, ಜೀವನ ಕ್ರಮವನ್ನು, ಬೇಡಿಕೆಗಳನ್ನು ಅರ್ಥಮಾಡಿಕೊಂಡು ಅವರನ್ನು ಮುಂದಕ್ಕೆ ತರುವ ದಿಕ್ಕಿನಲ್ಲಿ ಇನ್ನೂ ಸರ್ಕಾರದವರು ಯಾವ ಹೆಜ್ಜೆಯನ್ನೂ ಇಟ್ಟಂತೆ ಕಾಣಲಿಲ್ಲ. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಲಂಬಾಣಿಗರು ಕೆಲವರು ಇನ್ನೂ ಕಾಡುಗಳಲ್ಲೇ ವಾಸ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಅಭಿವೃದ್ಧಿಗೆ ತರುವುದಕ್ಕೆ ಒಂದು ಸಮಗ್ರವಾದ ಯೋಜನೆಯನ್ನು ಕೈಕೊಳ್ಳಬೇಕು. ಒಂದು ಯೋಜನೆಯ ಪ್ರಕಾರ ನೀವು ಕೊಡುವ ಹಣವನ್ನೂ ಮತ್ತು ಕೇಂದ್ರದವರು ಕೊಡುವ ಹಣವನ್ನೂ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಆಹಾರದ ಇಲಾಖೆಯ ವ್ಯವಹಾರಗಳಲ್ಲಿ ಸುಮಾರು 80 ಲಕ್ಷ ರೂಪಾಯಿಗಳು ಹಾಗೆಯೇ ಉಳಿದಿವೆಯೆಂದು ಆಡಿಟ್ ರಿಪೋರ್ಟ್‌ನಲ್ಲಿ ಬಂದಿರತಕ್ಕ Objectionsನಲ್ಲಿ ಕಾಣಬರುತ್ತದೆ. ಅನೇಕ ರೀತಿಯ ವ್ಯವಹಾರಗಳು ಈ ಇಲಾಖೆಯಲ್ಲಿ ನಡೆಯಿತು. ಅದನ್ನೀಗ ಪುನಃ ನಾವು ಪ್ರಸ್ತಾಪ ಮಾಡಬೇಕಾದ್ದಿಲ್ಲವೆಂದು ನಾನು ತಿಳಿದಿದ್ದೇನೆ. ಆದರೂ ನಡೆದಿರತಕ್ಕ ವಿಚಾರದ ಮೇಲೆ Post Mortem ಎನ್ನುವ ಹಾಗೆ ಕೆಲವು ಜನ ಗುಮಾಸ್ತರುಗಳು ಲೋಪ ದೋಷಗಳನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ನೋಡುವಲ್ಲಿ ಎಷ್ಟೋ ವೇಳೆ ಜವಾಬ್ದಾರಿ ಯಾರದು, ಯಾರ ತಲೆಯ ಮೇಲೆ ಜವಾಬ್ದಾರಿ ಹೊರಿಸಬೇಕೆಂದು ನಿರ್ಧರಿಸುವುದೇ ಕಷ್ಟವಾಗಿದೆ. ಈ ಇಲಾಖೆಯಿಂದ 90 ಕೋಟಿ ರೂಪಾಯಿಗಳ ವ್ಯವಹಾರ ನಡೆಯಿತೆಂದು ಅಂಕಿಗಳನ್ನು ಸರಕಾರದವರು ಒದಗಿಸಿದ್ದಾರೆ. ಒಂದು ರೀತಿಯಲ್ಲಿ ಈ ಸಂದರ್ಭ 'ಉಂಡೋರೇ ಜಾಣ' ಎನ್ನುವಂತೆ ಆಗಿದೆ. ಯಾರ್ಯಾರಿಗೆ ಎಷ್ಟೆಷ್ಟು ದಕ್ಕಿತೋ ಅದು ದಕ್ಕಿಯೇ ಹೋಗಿದೆ. ಪತ್ತೆ ಹಚ್ಚುವುದೇ ಕಷ್ಟವಾದರೂ, 'ಹೊಳೆಗೆ ಹಾಕಿದರೂ ಅಳೆದು ಹಾಕು' ಎನ್ನುವಹಾಗೆ ಇಲಾಖೆಯವರು ಕೆಲಸ ಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ರೈಸ್ ಮಿಲ್‌ಗಳವರಿಂದ ಸರ್ಕಾರಕ್ಕೆ ಕೆಲವು ಹಣ ಬರಬೇಕಾದ್ದಿದೆ; ಕೆಲವು ರೈಸ್ ಮಿಲ್‌ಗಳವರಿಗೂ ಸರ್ಕಾರ ಸ್ವಲ್ಪಮಟ್ಟಿಗೆ ಕೊಡಬೇಕಾದ್ದಿದೆ. ಇವುಗಳ ಬಗ್ಗೆ ಹೆಚ್ಚು ಕಾಲ ವಿಳಂಬ ಮಾಡದೆ ಆ ವ್ಯವಹಾರಗಳನ್ನು ಬೇಗ ಖೈದು ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡಬಯಸುತ್ತೇನೆ.

ಉಣ್ಣೆ ಕೈಮಗ್ಗದ ನೆಯ್ಗೆಯವರಿಗೂ ಮತ್ತು ರೇಷ್ಮೆ ಕೈಮಗ್ಗದ ನೆಯ್ಗೆಯವರಿಗೂ ನಾಲ್ಕು ಲಕ್ಷ ಮತ್ತು ಐದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುವುದಕ್ಕೆಂದು ಒಟ್ಟು ಒಂಬತ್ತು ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಹೀಗೆ ಸಾಲವನ್ನು ಕೊಡುವುದರಲ್ಲಿ ನೇರವಾಗಿ ಅವಶ್ಯಕತೆಯಿರತಕ್ಕ ಬಡವರಾಗಿರತಕ್ಕಂಥ ನೆಯ್ಗೆಕಾರರಿಗೆ ಸೊಸೈಟಿಗಳ ಮುಖಾಂತರ ತಲಪುವಹಾಗೆ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಅನೇಕ ಸೊಸೈಟಿಗಳ ವಿಷಯದಲ್ಲಿ ಅವುಗಳ ಲೆಕ್ಕಗಳನ್ನು ಆಡಿಟ್ ಮಾಡಿದುದರ ಮೇಲೆ ಅನೇಕ ಲಕ್ಷ ರೂಪಾಯಿಗಳು ಲೆಕ್ಕಪತ್ರಗಳಲ್ಲಿ ವ್ಯತ್ಯಾಸವಾಗಿರುವುದು ಕಂಡು ಬಂದಿದೆ. ಆದರೂ ಕೂಡ, ಸರ್ಕಾರದವರು ಅವುಗಳ ವಿಷಯದಲ್ಲಿ ಇನ್ನೂ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಹೇಳಬಯಸುತ್ತೇನೆ. ಸರ್ಕಾರದವರು ಈಗಾಗಲೇ ಯೋಚನೆಮಾಡುತ್ತಿರುವ ಹಾಗೆ ತಾವು ರೈತರಿಗೆ ಸಾಲವಾಗಿ ಕೊಡತಕ್ಕ ಹಣವನ್ನು, ರಿಸರ್ವ್ ಬ್ಯಾಂಕಿನಿಂದ, ಅಪೆಕ್ಸ್ ಬ್ಯಾಂಕಿನಿಂದ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಸೊಸೈಟಿಗಳ ಮೂಲಕವೇ ಮಾಡಬೇಕೆಂದು ಒಂದು ಬೃಹತ್ ಯೋಜನೆಯನ್ನು ಮಾಡಿರುವಂತೆ ಕಾಣುತ್ತದೆ. ಇದುವರೆಗೆ ಹೇಗೆ ನಮ್ಮವರು ತಮ್ಮವರು ಎಂದು ನಡೆದುಕೊಂಡು ಬಂದಿದೆಯೋ ಅದನ್ನು ಮಾಡದೆ ಸೊಸೈಟಿಗಳ ಮೂಲಕವೇ ಎಲ್ಲಾ ವ್ಯವಹಾರಗಳನ್ನೂ ನಡೆಸಬೇಕೆಂದು ಹೇಳುತ್ತೇನೆ. ಸೊಸೈಟಿಯೆಂಬುದು ಒಂದು ಟ್ರಸ್ಟ್ ಇದ್ದ ಹಾಗೆ. ನಮ್ಮಲ್ಲಿ ಹೆಚ್ಚು ಜನಕ್ಕೆ ವಿದ್ಯೆಯಿಲ್ಲದಿರುವುದರಿಂದ ಅನೇಕ ಷೇರುಹೋಲ್ಡರುಗಳು, ತಾವು ಷೇರು ಪಡೆದಿದ್ದರೂ ಸೊಸೈಟಿಗಳ ವ್ಯವಹಾರಗಳಲ್ಲಿ ಅನಾಸಕ್ತರಾಗಿರುತ್ತಾರೆ; ನಿಶ್ಚೇಷ್ಟರಾಗಿ ಏನೂ ಹೇಳದೆ ಸುಮ್ಮನಿರುತ್ತಾರೆ. ಷೇರುದಾರರ ಜವಾಬ್ದಾರಿಯೇನೆಂಬುದೇ ಅವರಿಗೆ ಗೊತ್ತಿರುವುದಿಲ್ಲ. ಕೇವಲ 10-15 ಜನರು ಮಾತ್ರ ಆರಿಸಿ ಚುನಾವಣೆಯಾಗಿ ಬರುತ್ತಿರುತ್ತಾರೆ. ಅವರಲ್ಲಿಯೂ ಕೆಲವು ಜನರು ಮಾತ್ರ ಜೀವಂತರಾಗಿರುತ್ತಾರೆ ಅಷ್ಟೆ. ಅವರುಗಳೇ ತಮ್ಮ ಇಷ್ಟದಂತೆ ಕೆಲಸ ನಡೆಸುತ್ತಿರುತ್ತಾರೆ. ಷೇರುದಾರರುಗಳು ಒಂದನ್ನೂ ಕಣ್ಣುಬಿಟ್ಟು ನೋಡುವುದಿಲ್ಲ. ಇದರಿಂದಾಗಿ ಅನೇಕ ಲೋಪದೋಷಗಳು ಕಾಣಬರುತ್ತಿವೆ. ಇಂದು ಈ ಕಾರಣದಿಂದಲೇ ಎಷ್ಟೋ ಮಲ್ಟಿಪರ್ಪಸ್ ಸೊಸೈಟಿಗಳ ಗತಿ ಕರುಣಾಜನಕವಾಗಿದೆ. ಅನೇಕ ಸಂದರ್ಭಗಳಲ್ಲಿ ಯಾರು ಏನು ವ್ಯವಹಾರ ನಡೆಸಿದರೆಂಬುದನ್ನು ಹೇಳುವುದೇ ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರು ಹಿಂದಿನ ಈ ಅನುಭವದಿಂದ ಎಚ್ಚೆತ್ತುಕೊಂಡು ಏನಾದರೂ loop-holesಗಳಿದ್ದರೆ ಅವುಗಳನ್ನು ಮುಚ್ಚುವುದಕ್ಕೆ, ಮನದಟ್ಟಾದ ಲೋಪದೋಷ

(ಶ್ರೀ ಎಸ್. ಗೋಪಾಲಗೌಡ.)

ಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಸಾಲಗಳನ್ನು ಕೊಡುವಾಗ ತೆಗೆದುಕೊಳ್ಳುವಾಗ ಸೊಸೈಟಿಗಳ ಮುಖಾಂತರವೇ ತೆಗೆದುಕೊಳ್ಳುವುದರ ಕಡೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಿದರೆ ತಪ್ಪಾಗಲಾರದು. ಕೋ-ಆಪರೇಟಿವ್ ಸೊಸೈಟಿಗಳ ವಿಚಾರದಲ್ಲಿ personnelನ್ನು ತರಬೇತುಮಾಡುವುದಕ್ಕೆಂದು ಎಷ್ಟು ಲಕ್ಷ ರೂಪಾಯಿಗಳ ಖರ್ಚು ಮಾಡುವುದಕ್ಕೆ ಬೇಕೆಂದು ಕೇಳುತ್ತಿದ್ದಾರೆ. ನಿಜ; ಇವೊತ್ತು ಕೋ-ಆಪರೇಟಿವ್ ಪ್ರಪಂಚದಲ್ಲಿ ಸರಿಯಾಗಿ ತರಪೇತು ಪಡೆದಿರುವವರು ಬೇಕಾಗಿದೆ. ಆದರೆ ಅದಕ್ಕಾಗಿಯೇ ಇಷ್ಟು ಹಣವನ್ನು ಸರ್ಕಾರದವರು ಖರ್ಚುಮಾಡಬೇಕೇ ಎಂಬ ಸಮಸ್ಯೆ ಬರುತ್ತದೆ. ಏಕೆಂದರೆ ಸಹಕಾರವೆಂಬುದು ನಮ್ಮ ಅವಶ್ಯಕತೆಯ ಮೇಲೆ, ನಾವು ಯಾವ ರೀತಿ ವರ್ತಿಸುತ್ತೇವೆ ಎಂಬದರ ಮೇಲೆ ನಿಂತಿದೆ. ಸರ್ಕಾರದವರಿಂದ ಐದು ತಿಂಗಳು ಕಾಲ ಟ್ರೈನಿಂಗ್ ಪಡೆದ ಇವುಗಳ ಮುಖಾಂತರ ಎಷ್ಟುಮಟ್ಟಿಗೆ, ಯಾವ ರೀತಿಯಲ್ಲಿ ನಮ್ಮ ಸರ್ಕಾರ ಸೇವೆಯನ್ನು ನಿರೀಕ್ಷಿಸಬಹುದು, ಅವರು ಎಷ್ಟು ಮಟ್ಟಿಗೆ ಸೇವೆ ಸಲ್ಲಿಸುತ್ತಾರೆ ಎಷ್ಟು ದಿವಸ ಸಲ್ಲಿಸುತ್ತಾರೆ ಎಂಬುದು ಕಾದು ನೋಡತಕ್ಕ ಪ್ರಶ್ನೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಹಣವನ್ನು ಖರ್ಚುಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಬಿಲ್ಲನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ನಮ್ಮ ಎದುರು ಪಕ್ಷದ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡರು ಕೆಲವು ವಿಷಯಗಳನ್ನು ಸೂಚಿಸಿದರು. ಮೊದಲನೆಯದಾಗಿ ಸರ್ಕಾರದವರು ಭೂದಾನದ ಚಳವಳಿಯ ವಿಷಯದಲ್ಲಿ ನಡೆಸಿರತಕ್ಕ ಕಾರ್ಯಕ್ರಮ ಇಡೀ ಇಂಡಿಯಾ ದೇಶದಲ್ಲೇ ನಡೆಸದಿರತಕ್ಕ ದೊಡ್ಡ ಕಾರ್ಯಕ್ರಮ. ಇಂಥ ಮಹತ್ಕಾರ್ಯವನ್ನು ಕೈಕೊಂಡು ವಿದ್ಯಾಭ್ಯಾಸಮಾಡತಕ್ಕ ಬಡಹುಡುಗರಿಗೂ, ಹಳ್ಳಿಗಾಡಿನ ಹುಡುಗರಿಗೂ ಅನುಕೂಲ ಮಾಡಿ ಕೊಡುವ ಉದ್ದೇಶದಿಂದ ಭೂ-ಸಂಪಾದನೆ ಮಾಡಿರುವುದಕ್ಕಾಗಿ ಇಡೀ ಮೈಸೂರು ದೇಶವೇ ಹೆಮ್ಮೆ ಪಡಬೇಕಾಗಿದೆ. ಸರ್ಕಾರದವರು ಈ ಸಂಬಂಧದಲ್ಲಿ ಮೂರ ಲಕ್ಷ ರೂಪಾಯಿಗಳನ್ನು ವ್ಯವಸಾಯೋಪಕರಣಗಳಿಗಾಗಿಯೆಂದು ಸೇರಿಸಿದ್ದಾರೆ. ಈ ಹಣವನ್ನು ಕೊಡುವುದಕ್ಕೆ ಒಪ್ಪಿದರೂ ಕೂಡ ಮಾನ್ಯ ಸ್ನೇಹಿತರು ಒಂದು ಟೀಕೆ ಮಾಡಿದರು. ಆಡಳಿತ ವರ್ಗದವರಿಗೆ ಕೊಟ್ಟರೆ ಇದರ ಕೆಲಸ ಅಷ್ಟು ಚೆನ್ನಾಗಿ ನಡೆಯುವುದಿಲ್ಲವೆಂದು ಹೇಳಿ ಅಷ್ಟು ಉಗ್ರವಾಗಿಯಲ್ಲದಿದ್ದರೂ ತಕ್ಕಮಟ್ಟಿಗೆ ಟೀಕೆ ಮಾಡಿದರು. ನಾವು ಯಾವಾಗಲೂ ಒಂದು ಕೆಲಸಮಾಡಬೇಕಾದರೆ ಪ್ರಾರಂಭದಲ್ಲಿ ಅದು ಅಗಾಧವಾಗಿ ಬಹಳ ಕಷ್ಟವಾಗಿ ಕಾಣುತ್ತದೆ. ಏನೇ ಆಗಲಿ ಈಗ ಸರ್ಕಾರದವರು ಕೈಕೊಳ್ಳತಕ್ಕಂಥ ಕೆಲಸ ಇಡೀ ದೇಶಕ್ಕೇ ಸಂಬಂಧಪಡುವ ಕೆಲಸ. ಓದತಕ್ಕಂಥ ಎಲ್ಲ ಬಡ ವಿದ್ಯಾರ್ಥಿಗಳಿಗೂ ಅನುಕೂಲ ಮಾಡುವುದಕ್ಕಾಗಿ, ರೈತನು ಕೊಡತಕ್ಕ ದುಡ್ಡನ್ನು ಆತನ ಮಕ್ಕಳ ಅನುಕೂಲಕ್ಕಾಗಿ ಕೊಡುವುದು ನ್ಯಾಯವೇ. ಇಂಥಾದ್ದನ್ನು ಶ್ರೀಮಾನ್ ಗೋಪಾಲಗೌಡರು ವಿರೋಧಿಸುವುದರಲ್ಲಿ ನ್ಯಾಯವಿಲ್ಲ. ಏಕೆಂದರೆ ನಾಳೆ ಶ್ರೀಮಾನ್ ಗೋಪಾಲಗೌಡರ ಹುಡುಗಗೂ ಕೂಡ ಹೋಗಬಹುದು. ಮುಖ್ಯವಾಗಿ ರೈತನು ಕೊಟ್ಟ ಹಣವನ್ನು ಖರ್ಚುಮಾಡಿ ಬಂದ ಉತ್ಪತ್ತಿಯನ್ನು ರೈತನ ಮಕ್ಕಳಿಗೇ ಹಂಚುವಂತೆ ಮಾಡಿರುವ ಈ ಯೋಜನೆ ನಮ್ಮ ಮೈಸೂರು ದೇಶಕ್ಕೇ ಅಲ್ಲ, ಇಡೀ ಇಂಡಿಯಾ ದೇಶಕ್ಕೇ ಭೂಷಣವಾದದ್ದು ಎಂದು ಹೇಳುತ್ತೇನೆ.

3 P.M.

ಹೀಗೆ ಮಂತ್ರಿಗಳು ಮಾಡುವ ಕೆಲವು ಕೆಲಸಕಾರ್ಯಗಳನ್ನು ಸದಸ್ಯರಾದ ನಾವು ಮಾಡುವುದಕ್ಕಾಗುವುದಿಲ್ಲ. ಅವರೆಲ್ಲಾ ಇರುವುದು ನಾವು ಕೊಡತಕ್ಕ ಕಂದಾಯ, ತೆರಿಗೆ ಇತ್ಯಾದಿಗಳನ್ನು ದೇಶಾದ್ಯಂತವೂ ಜನರಿಗೆಲ್ಲಾ ಸರಿಯಾಗಿ ಹಂಚಿಕೆ ಮಾಡುವುದಕ್ಕೆ ಇದ್ದಾರೆ. ಇದರಿಂದ ದೇಶಕ್ಕೆ ತುಂಬ ಅನುಕೂಲವಾಗುತ್ತದೆ. ಆದುದರಿಂದ ಇಂಥ ಒಳ್ಳೆ ಕಾರ್ಯಗಳಿಗೆ ಸದಸ್ಯರಾದ ನಾವು ಎಲ್ಲ ಬೆಂಬಲಗಳನ್ನೂ ನೀಡಬೇಕೇ ಹೊರತು ವೃಥಾ ಟೀಕೆ ಮಾಡುವುದು ಸರಿಯಲ್ಲ. ನಾವೆಲ್ಲರೂ ದೇಶಕ್ಕೂ, ನಮ್ಮ ಸರ್ಕಾರಕ್ಕೂ ಮತ್ತು ಈ ಮಾನ್ಯ ಸಭೆಗೂ ಕೀರ್ತಿ ತರುವಂಥ ರೀತಿಯಲ್ಲಿ ವರ್ತಿಸುವುದು ಒಳ್ಳೆಯದೆಂದು ಭಾವಿಸಿದ್ದೇನೆ—ಆದರೆ ಬರಿ ಟೀಕೆ ಮಾಡುವುದು ಸರಿಯಾದದ್ದಲ್ಲವೆಂದು ನನ್ನ ಅಭಿಪ್ರಾಯ.

Mr. SPEAKER.—Now the House will rise for lunch and meet at 3-30.

The House rose for Lunch at Two Minutes past Three of the Clock and reassembled at Thirty-five Minutes past Three of the Clock.

[MR. SPEAKER in the Chair.]

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸ್ವಾಮಿ, ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಸರ್ಕಾರದವರು ಕೈಗೊಂಡಿರತಕ್ಕಂಥ ಭೂದಾನ ಚಳವಳಿಯು ಬಹಳ ಶ್ಲಾಘನೀಯವಾದದ್ದು. ಮಹಾತ್ಮ ಗಾಂಧೀಜಿಯವರೂ ಸಹ ನಮ್ಮ ಇಂದಿನ ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸಬೇಕೆಂದು ಹೇಳಿದ್ದಾರೆ. ವಿದ್ಯಾರ್ಥಿಗಳು ಪಾಠಶಾಲೆಯಿಂದ ಹೊರಗೆ ಬಂದ ಮೇಲೆ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಸಹ ಹೇಳಿದ್ದಾರೆ. ಅದಕ್ಕನುಸಾರವಾಗಿ ಇಂದು ನಮ್ಮ ಸರ್ಕಾರ ಕೈಗೊಂಡಿರುವ ಭೂದಾನ ಚಳವಳಿಯು ಇಂದಿನ ಮತ್ತು ನಮ್ಮ ಮುಂದಿನ ಪೀಳಿಗೆಗೆ ಅನುಕೂಲಪಡಿಸತಕ್ಕದ್ದಾಗಿದೆ. ಇದಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಹೇಳಿ ಈ ವಿಷಯವನ್ನು ಇಷ್ಟಕ್ಕೇ ಕೈಬಿಡುತ್ತೇನೆ.

ಶ್ರೀಮಾನ್ ಗೋಪಾಲಗೌಡರು ಮತ್ತೊಂದು ವಿಚಾರ ಹೇಳಿದ್ದಾರೆ. ಅದೇನೆಂದರೆ ಈ ಮಂತ್ರಿಗಳು ಹಳ್ಳಿಗಾಡುಗಳ ಕಡೆ ಹೋದಾಗ ಈ ಶಾಸನ ಸಭಾ ಸದಸ್ಯರು ಹೇಳಿದಂತೆ ಕೆಲಸ ನಡೆಸಿ ಕೊಡುತ್ತಿದ್ದಾರೆಂದು ಆಪಾದನೆ ಮಾಡಿದರು. ಶಾಸನ ಸಭೆಗೆ ಬಂದಿರತಕ್ಕಂಥ 105 ಜನ ಸದಸ್ಯರುಗಳಾದ ನಾವು ನಮ್ಮ ನಮ್ಮ ತಾಲ್ಲೂಕುಗಳಲ್ಲಿರತಕ್ಕ ಕುಂದುಕೊರತೆಗಳನ್ನು ಸರ್ಕಾರದವರಿಗೆ ತಿಳಿಸದಿದ್ದರೆ ಅವು ಅವರಿಗೆ ಗೊತ್ತಾಗುವ ಬಗೆಯಾದರೂ ಹೇಗೆ? ನಾವು ಅವರಿಗೆ ಇಲ್ಲಿರುವಾಗಲೂ ಮತ್ತು ಸಂಚರಣೆ ಬಂದಾಗಲೂ ವಿಚಾರಗಳನ್ನು ತಿಳಿಸಲೇ ಬೇಕು. ಅದಕ್ಕೆ ಅವರು

ಅನುಕೂಲತೆಗಳನ್ನು ಕಲ್ಪಿಸಿಕೊಡಲೇ ಬೇಕು. ಇದು ಅವರ ಕರ್ತವ್ಯ. ಅವರ ಕರ್ತವ್ಯಕ್ಕನುಸಾರವಾಗಿ ಅವರು ಕೆಲಸಗಳನ್ನು ನಡೆಸಿಕೊಂಡು ಬರುತ್ತಿದ್ದಾರೆಯೇ ಶಿವಾಯಿ ಅವರು ನಮ್ಮ ಹೇಳಿಕೆಗಳಿಗಾಗಲಿ ಅಥವಾ ನಮ್ಮ ಗೊಡ್ಡು ಬೆದರಿಕೆಗಳಿಗಾಗಲಿ ಹೆದರಿ ಕೆಲಸಮಾಡುವುದಿಲ್ಲ. ಅಂಥ ಸರ್ಕಾರವೂ ಈಗ ಇಲ್ಲ. ಬೇಲೂರು ತಾಲ್ಲೂಕಿನಲ್ಲಿ ಹೇಗೆ 2 ಲಕ್ಷ ರೂಪಾಯಿಗಳ ಕೆಲಸವನ್ನು ಸರ್ಕಾರದವರು ನಡೆಸಿದರೆಂದು ಕೇಳಿದರು. ಆದರೆ ನಾನು ಹೇಳುತ್ತೇನೆ, ಅವರ ಜಿಲ್ಲೆಯಾದ ಶಿವಮೊಗ್ಗಕ್ಕೆ ಇನ್ನು 10 ವರ್ಷಗಳು ಖರ್ಚು ಮಾಡಿದ್ದರೂ ಖರ್ಚಾಗದೆ ಇದ್ದಷ್ಟು ಮೊಬಲಗನ್ನು ಈಗ ಆ ಒಂದು ಜಿಲ್ಲೆಗೆ ಖರ್ಚುಮಾಡಿರುತ್ತಾರೆ ಎಂದು. ಇನ್ನು ಆ ಜಿಲ್ಲೆಯಲ್ಲಿ 10 ವರ್ಷಕಾಲ ಯಾವ ಕೆಲಸ ಕಾರ್ಯಗಳನ್ನೂ ಕೈಗೊಳ್ಳಲೇ ಬಾರದು. ಅಂಥ ರೀತಿಯಲ್ಲಿ ಅಲ್ಲಿ ಕೆಲಸಗಳು ನಡೆದಿವೆ. ಅಷ್ಟರಮಟ್ಟಿಗೆ ಅಲ್ಲಿಗೆ ದುಡ್ಡನ್ನು ಖರ್ಚುಮಾಡಿದ್ದಾರೆ. ಈ ವಿಚಾರ ಏನೇ ಇರಲಿ, ಸರ್ಕಾರದವರು ಕೈಗೊಳ್ಳುವ ಕೆಲಸ ಕಾರ್ಯಗಳ ಬಗ್ಗೆ ಅಷ್ಟಿಷ್ಟು ಅವರನ್ನು ಶ್ಲಾಘನೆ ಮಾಡಬೇಕು. ಹಾಗೆ ಮಾಡುವುದರ ಬದಲು ವೃಥಾ ಟೀಕೆಗಳನ್ನು ಮಾಡಬಾರದೆಂದು ಹೇಳುತ್ತೇನೆ. ಯಾವುದೋ ಒಂದು ತಾಲ್ಲೂಕಿಗೆ ಈ ಮಂತ್ರಿ ಮಂಡಳದವರು ಹೆಚ್ಚಾಗಿ ದುಡ್ಡು ಕೊಟ್ಟಿದ್ದಾರೆ ಎಂದು ಹೇಳಿ ಅದನ್ನೇ ಒಂದು ದೊಡ್ಡ ಭಾಷಣ ಮಾಡುವುದು ಸರಿಯಾದದ್ದಲ್ಲ. ಸರ್ಕಾರ ಎಲ್ಲಾ ಜಿಲ್ಲೆಗಳಿಗೂ ಮತ್ತು ತಾಲ್ಲೂಕುಗಳಿಗೂ ಅನುಕೂಲ ಮಾಡಲಿಕ್ಕೇ ಸಿದ್ಧವಾಗಿ ನಿಂತಿದೆ. ಯಾವ ಯಾವ ಜಿಲ್ಲೆಯಲ್ಲಿ ಏನೇನು ಕಷ್ಟಸುಖಗಳಿವೆ ಎನ್ನುವುದನ್ನು ಹೇಳಿಕೊಳ್ಳುವುದಕ್ಕೆ ಎಲ್ಲರಿಗೂ ಅವಕಾಶವಿದೆ ಮತ್ತು ಹಕ್ಕೂ ಇದೆ.

ಆದರೆ ನಾನಿನ್ನು ಈ ಪಿ. ಡಬ್ಲ್ಯು. ಡಿ. ವಿಚಾರದಲ್ಲಿ ಈಗ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಪಿ. ಡಬ್ಲ್ಯು. ಡಿ. ಮಂತ್ರಿಗಳೂ ಹಾಜರಿರುವುದರಿಂದ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ಇಲಾಖೆಯಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ ಈ ಇಲಾಖೆಯವರು ದೊಡ್ಡ ದೊಡ್ಡ ಕೆಲಸಗಳಿಗೆ ಕೈಹಾಕತಕ್ಕವರಾಗಿರುತ್ತಾರೆ. ತಾವು ರೈತನಾದವನು ಕಂದಾಯ ಕೊಡದಿದ್ದರೆ ಆತನ ಎತ್ತು ಗಾಡಿಗಳನ್ನು ಹಿಡಿದು ಹೇಗೆ ಅವುಗಳನ್ನು ಜಪ್ತಿಮಾಡುತ್ತೀರೋ, ಹಾಗೆಯೇ ಅವರಿಂದ ಕಂದಾಯ ವಸೂಲ್ಮಾಡುತ್ತೀರೋ ಅದೇ ರೀತಿ ಈ ಪಿ. ಡಬ್ಲ್ಯು. ಡಿ.ಯಲ್ಲಿ ಅನ್ಯಾಯ ನಡೆಸಿರತಕ್ಕವರಿಂದ ಸರ್ಕಾರ ನಿರ್ದಾಕ್ಷಿಣ್ಯವಾಗಿ ಹಣವನ್ನು ವಸೂಲ್ಮಾಡಬೇಕೆಂಬುದನ್ನು ಒತ್ತಾಯಪಡಿಸಿ ತಿಳಿಸುತ್ತಿದ್ದೇನೆ. ಈಗ ಕೆಲವು ಮುಖ್ಯಾಂಶಗಳನ್ನು ಸರ್ಕಾರದವರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ಈ ಹಿಂದೆಯೇ ನಾನು ಪಿ. ಡಬ್ಲ್ಯು. ಡಿ. ಸಚಿವರಲ್ಲಿ ಸಿಮೆಂಟ್ ಕಾಂಕ್ರೀಟುಗಳ ಕೆಲಸದ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕೆಂದು ಕೇಳಿಕೊಂಡಿದ್ದುದಕ್ಕೆ ಆಗಲೆಂದು ಉತ್ತರ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಅಂಥ ಸಮಿತಿಗಳೊಂದನ್ನೂ ಅವರು ಮಾಡಿಲ್ಲ. ತರೀಕೆರೆ ಹತ್ತಿರ ಬೆಂಗಳೂರು–ಹೊನ್ನಾವರ ರೋಡಿನಲ್ಲಿ 138ನೆಯ ಮೈಲಿಯಿಂದ 154ನೆಯ ಮೈಲಿ ವರೆಗೂ ಅಂದರೆ 16 ಮೈಲಿಗಳ ವರೆಗೂ ಅಲ್ಲಿ ಜಲ್ಲಿಯನ್ನು ಶೇಖರಣೆ ಮಾಡಿದ್ದಾರೆ. ಇಲ್ಲಿಯವರೆಗೂ ಗಜ 1ಕ್ಕೆ 9½ ರೂಪಾಯಿಗಳಿಂದ ಹಿಡಿದು 10 ರೂಪಾಯಿಗಳ ವರೆಗೂ ರೇಟನ್ನು ಹಾಕುತ್ತಿದ್ದರು. ಆದರೆ ಈ ದಿವಸ ಏನೋ ಒಂದು ಕುಂಟು ನೆಪ ಮಾಡಿಕೊಂಡು ಯಾವ ಟೆಂಡರುಗಳನ್ನೂ ಕರೆಯದೆ ಗಜ ಒಂದಕ್ಕೆ 12 ರೂಪಾಯಿಗಳ ರೇಟನ್ನು ಹಾಕಿ ಕೊಟ್ಟಿದ್ದಾರೆ. ಹೀಗೆ ಏಕ್‌ದಂ ಗಜ ಒಂದಕ್ಕೆ ಎರಡು ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಈಗ ಸರ್ಕಾರ 10 ಸಾವಿರ ರೂಪಾಯಿಗಳ ಲುಕ್ಸಾನಾಗುತ್ತದೆ. ಈ ವಿಚಾರವಾಗಿ ಈ ಅಸೆಂಬ್ಲಿಯ ಮುಂದೆ ನಾನು ಒಂದು ಸಬ್‌ಜೆಕ್ಟನ್ನೇ ತಂದಿದ್ದೆನು. ನಾನೂ ಕೂಡ ಮೊನ್ನೆ ತಾನೆ ತರೀಕೆರೆಯಲ್ಲಿ ಈ ವಿಚಾರಗಳನ್ನೆಲ್ಲಾ ಮಾಡಿ ಇದರ ವಿದ್ಯಮಾನವನ್ನು ತಿಳಿದುಕೊಂಡಿದ್ದೇನೆ. ನನ್ನ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರೇ ಗಜ 1ಕ್ಕೆ 12 ರೂಪಾಯಿಗಳನ್ನು ಕೊಡಲಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಈಗ ಅವರೇನು ಟವರ ಗಜ ಒಂದಕ್ಕೆ 12 ರೂಪಾಯಿಗಳ ರೇಟನ್ನು ಕೊಟ್ಟಿದ್ದಾರೋ ಅದೇ ಜಲ್ಲಿಯನ್ನು 10 ರೂಪಾಯಿಗಳ ರೇಟಿಗೆ ಸರಬರಾಯಿ ಮಾಡಲು ಸಿದ್ಧವಾಗಿದ್ದೇನೆ. ಈ ದಿವಸವಾದರೋ ದವಸ ಧಾನ್ಯಗಳ ಧಾರಣೆವಾಸಿಗಳೆಲ್ಲಾ ಕಮ್ಮಿಯಾಗಿರುತ್ತವೆ. ಇಂಥ ಅನ್ಯಾಯಗಳನ್ನು ನಾವು ಸರ್ಕಾರದವರ ಗಮನಕ್ಕೆ ತಂದಾಗ ಅವರು ತಕ್ಕ ವಿಚಾರಣೆ ಮಾಡಲೇಬೇಕು.

ಶ್ರೀ ಕೆ. ಹನುಮಂತಯ್ಯ.—ತರೀಕೆರೆಯ ಹತ್ತಿರವೋ?

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹೌದು. ಒಂದು ಸ್ಥಳದಿಂದ ಜಲ್ಲಿಯನ್ನು ಮತ್ತೊಂದು ಸ್ಥಳಕ್ಕೆ ಸಾಗಿಸಿದರೆ ದೂರ, ಮೈಲಿಯೊಂದಕ್ಕೆ ಒಂದೂ ಕಾಲು ರೂಪಾಯಿ ಕೊಟ್ಟಿದ್ದಾರೆ. ಈ ವಿಚಾರ ನಿಜವೋ—ಸುಳ್ಳೋ ಎನ್ನುವುದನ್ನು ಪರೀಕ್ಷೆ ಮಾಡಬೇಕಾಗಿದ್ದರೆ ತಾವು ಯಾರನ್ನಾದರೂ ನನ್ನ ಜೊತೆಯಲ್ಲೇ ಕಳುಹಿಸಿಕೊಡಿ; ನಾನೇ ಈ ಜವಾಬ್ದಾರಿಯನ್ನು ಹೊರುತ್ತೇನೆ. ತಾವು ಇಂಥ ಕಳ್ಳತನಗಳನ್ನು ಹಿಡಿದು ತಕ್ಕ ಶಿಕ್ಷೆ ಮಾಡದೆ ಹೋದರೆ ದೇಶಕ್ಕೆ ತುಂಬ ಅನ್ಯಾಯವಾಗುತ್ತದೆ. ಒಂದು ಮೈಲಿ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕಾದರೆ ಸಿಬರವಾಗಿ 45 ಸಾವಿರದಿಂದ 48 ಸಾವಿರದ ವರೆಗೂ ಖರ್ಚಾಗುತ್ತದೆ. ಇದಕ್ಕೆ ಮೇಲಾಗುವುದಿಲ್ಲ. ಅಂಥದರಲ್ಲಿ ಈಗ ಇಲಾಖೆಯವರು ಒಂದು ಮೈಲಿಗೆ 60 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮೈಲಿಯೊಂದಕ್ಕೆ 15—20 ಸಾವಿರ ರೂಪಾಯಿಗಳಷ್ಟು ಹಣ ಪೋಲಾಗಿದೆ. ಇಂಥ ಅನ್ಯಾಯಗಳನ್ನೆಲ್ಲಾ ತನಿಖೆ ಮಾಡಲು ನಿರ್ವಂಚನೆಯಿಂದ ಕೆಲಸ ಮಾಡತಕ್ಕಂಥ ಒಂದು ಸಮಿತಿಯನ್ನು ನೇಮಕಮಾಡಿ. ಆ ಸಮಿತಿಯಲ್ಲಿ ನನ್ನನ್ನೂ ಒಬ್ಬ ಸದಸ್ಯನನ್ನಾಗಿ ಮಾಡಿ. ಆಗ ನಾನು ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ತೋರಿಸುತ್ತೇನೆ. ಹಾಗೆ ಮಾಡದೆ ತಾವು ಯಾರಾರನ್ನೋ ಸೇರಿಸಿ ಸಮಿತಿ ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಏತಕ್ಕೆಂದರೆ ಈ ಇಂಜಿನಿಯರಿಂಗ್ ಇಲಾಖೆಯವರು ನಡೆಸುವ ಕಳ್ಳತನವನ್ನು ಕಂಡು ಹಿಡಿಯಲು ಆ ಬ್ರಹ್ಮನಿಂದಲೂ ಕೂಡ ಸಾಧ್ಯವಿಲ್ಲ. ಆದರೆ ನಾನು 4-5 ವರ್ಷ ಈ ಇಲಾಖಾ ಕೆಲಸದಲ್ಲಿ ನುರಿತವನಾದ್ದರಿಂದ ಈ ವಿಷಯಗಳನ್ನೆಲ್ಲಾ ಹೇಳುತ್ತಿದ್ದೇನೆ. ಈ ಕೆಲವು ವಿಚಾರಗಳನ್ನು ಪರಿಶೀಲಿಸುವುದಾಗಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದ್ದಾರೆ. ಆದರೆ ಇನ್ನೂ ಅದನ್ನು ಮಾಡಿದಂತೆ ಕಂಡು ಬರುವುದಿಲ್ಲ. ಇಂದಲ್ಲ ನಾಳೆಯಾದರೂ ಅವರು ಅಗತ್ಯವಾಗಿ ಇದನ್ನೆಲ್ಲಾ ವಿಚಾರಣೆ ಮಾಡಬೇಕೆಂದು ನಾನು ಅವರನ್ನು ಒತ್ತಾಯ ಪಡಿಸುತ್ತೇನೆ. ಈಗ ಸರ್ಕಾರದವರು ತಂದಿರುವ ಅಪ್ರೋಪ್ರಿಯೇಷನ್ ಬಿಲ್ಲು ಸಾಧುವಾದದ್ದು ಇದಕ್ಕೆ ಎಲ್ಲರೂ ಬೆಂಬಲ ನೀಡಿ ಇದನ್ನು ಪಾಸ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

Sri V. M. MASCARENHAS.—I welcome this Appropriation Bill and in doing so, I must say I am a little surprised at some of the comments made, specially by members of the Opposition. Unfortunately they are all absent.

Sri J. MOHAMED IMAM.—Natural.

Sri V. M. MASCARENHAS.—Natural? I do not know why. Sri Srinivasa Iyengar said that sandalwood in America gives a far better yield than sandalwood in Mysore or Shimoga and he therefore asked 'Why not introduce better types of machinery in the Mysore State so that we may get better yields?" I am afraid this hypothesis is perfectly wrong. What the Government of Mysore is doing is, they do not wish to send second grade sandalwood to America for the purpose of saving freight. The best sandalwood is being sent to Bush & Company and it is no wonder that the yields in America are higher, but the wood that is distilled in Shimoga and Mysore is of the lower variety and it is not therefore surprising that the yields in our factories are much lower. That is the only reason.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಗಂಧದ ಮರವನ್ನು ಅಲ್ಲಿಗೆ ಕಳುಹಿಸಿ ಎಣ್ಣೆ ತೆಗೆಸುವುದಕ್ಕೆ ಬದಲಾಗಿ ಇಲ್ಲೇ ಅದನ್ನು ತಯಾರು ಮಾಡಬಹುದಲ್ಲ ಎಂದು ಕೇಳಿದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಅಮೇರಿಕಾಕ್ಕೆ ಎಣ್ಣೆಯನ್ನೇ ಕಳುಹಿಸಿದಾಗ್ಯೂ ಅವರು ಈ ಎಣ್ಣೆಯ ಮೇಲೆ ಹಾಕತಕ್ಕ ಡ್ಯೂಟಿಗಳು ವಿಪರೀತವಾಗುವುದರಿಂದ ಅವುಗಳನ್ನು ತಪ್ಪಿಸಿಕೊಳ್ಳಲು ಎಂದರೆ ಆ ಹೆಚ್ಚಿನ ಖರ್ಚ ವೆಚ್ಚಗಳನ್ನು ಕಡಮೆ ಮಾಡತಕ್ಕ ಉದ್ದೇಶದಿಂದ ಗಂಧದ ಮರವನ್ನೇ ಅಲ್ಲಿಗೆ ಕಳುಹಿಸಿಕೊಡುತ್ತಿದ್ದೇವೆ.

Sri V. M. MASCARENHAS.—Another reason is that the quality of oil required in American markets has to conform to American standard and that quality is possible in American factories and it has been found that the sandalwood oil of Indian manufacture does not always conform to the analysis. That is one more reason why the Mysore Government thought it best to send it to America rather than distil it entirely here. The second point raised was that the transport and sale of timber to Hindustan Aircraft Factory was all wrong. I am afraid this statement cannot go unchallenged. It certainly does not cost Mysore Government Rs. 10 per cubic foot to transport it from the forest to the nearest depot. If you take the supplementary grant, and say that 40,000 cubic feet of timber costs Rs. 4 lakhs, I am afraid that interpretation is quite wrong.

Sri B. HUTCHE GOWDA.—That is the Government's explanation.

Sri V. M. MASCARENHAS.—You don't read it carefully. It is stated there that as heavy and large timber operations are going on in the submersion areas, which have to be cleared of all timber immediately and supplies of timber to Hindustan Aircraft, Ltd., and Vidhana Soudha to an extent of about 40,000 c.ft. have to be pushed through as per programme, this additional grant is very necessary. So, Rs. 4 lakhs are not meant only for the transport of 40,000 c. ft. of timber, but for removing varieties of timber found in the submerged area. More than 7,000 acres of forest are now being cleared by the Forest Department in the Lakkavalli Dam area and it has to be done before the next monsoon is in. You need a large amount of money so that all the timber may be salvaged. This amount is required for that purpose and not only for the transference of 40,000 cubic ft. of timber. Thirdly, Sir, it was commented upon that the rate of Rs. 10 per c.ft. of timber supplied to Hindustan Aircraft, Ltd., was very low. But unfortunately the Members who commented in that direction did not realise that Rs. 10 is the price of timber in the forest and it is not F. O. R., Bangalore. For a log of teak in the forest or the nearest depot, I would definitely say Rs. 10 is a very very good rate and I can assure every Hon'ble Member that the Government of Mysore is definitely not losing on this ground. Now, I go, Sir, to the next item. Some comments were made by my friend Sri T. C. Basappa about supplementary grants being very often not merely not used but even the original grants not being utilised. My personal feeling in the matter is that our Finance Department sometimes goes a wee bit wrong

and for this reason the late Public Accounts Committee recommended to the Government that every Department should have a trained Accountant who would keep a watch over the spending of the Department month by month and advise his departmental head how best to carry on and how best to avoid supplementary grants. Some very uncharitable comments have been made on the Bhoodan movement. I can only say that Bhoodan is a great and unique experiment, and as a student of science, I would like to add, an experiment by virtue of its name can lead to good results or to no results. The Government therefore must take every care to see that the Bhoodan movemen which they have launched with so much zeal, does not become a farce, but, on the other hand which does become the success which we all so much wish. With these remarks, I support the Bill with the only request that the Government will bear in mind that every spending Department should have a fairly good control at all stages of its spending and that it should always keep a watchful eye to see that every rupee that the Government spends, is spent usefully and in the best interests of the State.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಬಿಲ್ಲಿನ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮುಖ್ಯವಾಗಿ ನಾವು ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು ಎನ್ನುವ ಭೂದಾನ ಮತ್ತು ವಿದ್ಯಾದಾನ ಮೊದಲಾದ ಚಳವಳಿಗಳನ್ನು ಜಾರಿಗೆ ತರುವುದಲ್ಲದೆ ಅದಕ್ಕಾಗಿ ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇವೆ. ಹಿಂದೆ 1940-41 ಮತ್ತು 1941-42ನೇ ಇಸವಿಗಳಲ್ಲಿ Grow More Food Scheme ಪ್ರಕಾರ ಭೂಮಿ ಇಲ್ಲದ ಅನೇಕ ರೈತರಿಗೆ ಭೂಮಿಯನ್ನು ಕೊಟ್ಟಿತ್ತು. ಆದರೆ ಭೂಮಿ ಉಳತಕ್ಕವರಿಗೆ ಕೊಡಬೇಕು, ಭೂಮಿಯನ್ನು ಉಳುವವರು ಹೆಚ್ಚಾಗಿ ಕಷ್ಟಪಟ್ಟು ಕೆಲಸ ಮಾಡತಕ್ಕವರ ವಶದಲ್ಲಿರಬೇಕು ಎನ್ನುವ ಅಭಿಪ್ರಾಯ ದಿನೇ ದಿನೇ ಪ್ರಬಲವಾಗುತ್ತಿರುವಾಗ ಸರ್ಕಾರದವರು ಅನೇಕ ರೈತರಿಗೆ Grow More Food Scheme ಪ್ರಕಾರ ಕೊಟ್ಟಿದ್ದ ಜಮೀನುಗಳನ್ನು ವಾಪಸ್ಸು ಪಡೆಯುತ್ತಿದ್ದಾರೆ. ಅವರಿಗೆ ಉಳುಮೆ ಚೀಟುಗಳನ್ನು ಕೊಟ್ಟಿದ್ದಾರೆ. 10-12 ವರ್ಷಗಳ ವರೆಗೆ ರೈತರು ಜಮೀನನ್ನು ಆಬಾದು ಮಾಡಿರುವುದಕ್ಕೆ ಸಕಾರಣಗಳಿವೆ. ಹೀಗೆ ಇದ್ದರೂ ಸಹ ಈ forest guards ಮತ್ತು forest ಅಧಿಕಾರಿಗಳು ಯಾವುದೋ ಒಂದು ಸಬೂಬನು ಇಟ್ಟುಕೊಂಡು ರೈತರಿಗೆ ಇಲ್ಲದ ಸಲ್ಲದ ಕಿರುಕುಳಗಳನ್ನು ಕೊಟ್ಟು ಅವರನ್ನು ಜಮೀನಿನಿಂದ ಬಿಡುಗಡೆ ಮಾಡಿದ್ದಾರೆ. ಜೊತೆಗೆ ಈ ಮಾನ್ಯ ಸಭೆಯು ಹೋದ ಸಾರಿ ಫಾರೆಸ್ಟ್‌ನಿಂದ ಜಮೀನನ್ನು ಉಳುಮೆಗಾಗಿ ಕೊಡಬಾರದು ಎಂಬ ಒಂದು ನಿರ್ಣಯವನ್ನು ಮಾಡಿತ್ತು. ಆದರೆ ರೈತರಿಗೆ Grow More Food Scheme ಪ್ರಕಾರ ಕೊಟ್ಟಿರತಕ್ಕ ಜಮೀನನ್ನು ಬಿಡುಗಡೆ ಮಾಡಿಸಿ ಅವರಿಗೆ ಕಿರುಕುಳವನ್ನು ಕೊಡಬೇಕು ಎಂದು ಈ ನಿರ್ಣಯದಲ್ಲಿ ನಮೂದಾಗಿರುವುದು ನನಗಂತೂ ಗೊತ್ತಾಗಲಿಲ್ಲ. ಅನೇಕ ಕಡೆಗಳಲ್ಲಿ ನಾವು ಪ್ರತಿದಿನವೂ ನೋಡಬಹುದು. ಯಾವ ರೈತರು 10-12 ವರ್ಷಗಳಿಂದ ಎಲ್ಲಾ conditionsಗಳಿಗೂ ಒಳಪಟ್ಟು Grow More Food Scheme ಪ್ರಕಾರ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದರೂ ಸಹ ಅವರ ಜಮೀನುಗಳನ್ನು ಬಿಡಿಸಿ ಆ ಸ್ಥಳಗಳಲ್ಲಿ ಸರ್ಕಾರದವರು ಗುಣಿಗಳನ್ನು ಅಗೆದು ಗಿಡಗಳನ್ನು ನೆಟ್ಟು ಇವೊತ್ತಿನ ದಿವಸ ಜನರು ವ್ಯವಸಾಯ ಮಾಡುವುದಕ್ಕೆ ಜಮೀನು ಇಲ್ಲದೆ ಕೂಲಿಮಾಡುವುದಕ್ಕೆ ದಾರಿ ಇಲ್ಲದೆ ಅನೇಕ ಕಷ್ಟಗಳನ್ನು ಪಡುತ್ತಿದ್ದಾರೆ. ಅಂಥವರ ಬಗ್ಗೆ ಸರ್ಕಾರದವರು ಯಾವುದಾದರೂ ಸೂಕ್ತ ನೀತಿಯನ್ನು ಅನುಸರಿಸಬೇಕಾದದ್ದು ಬಹಳ ಮುಖ್ಯ. ಏಕೆಂದರೆ, Grow More Food Scheme ಪ್ರಕಾರ ಜಮೀನು, ಕೊಟ್ಟಾಗ ಅವರಿಗೆ ಕೆಲವು ನಿಯಮಗಳನ್ನು ಹಾಕಿದ್ದೀರಿ. ವರ್ಷಂಪ್ರತಿ ಜಮೀನು ಉಳುಮೆ ಮಾಡುವುದು, 10-12 ವರ್ಷ ಪರಬಾರೆ ಮಾಡಬಾರದು ಮತ್ತು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದರೆ ಅವರ ಜಮೀನನ್ನು ವಶಪಡಿಸಿಕೊಳ್ಳಬಹುದು. ಅದೂ ಇಲ್ಲದಿದ್ದರೆ ಏತಕ್ಕೋಸ್ಕರ ಅವರನ್ನು ಜಮೀನಿನಿಂದ ಉಚ್ಚಾಟನೆ ಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದರಲ್ಲಿ ಸರಿಯಾದ ನೀತಿಯನ್ನು ಅನುಸರಿಸಬೇಕಾದುದು ಬಹಳ ಮುಖ್ಯ. ಜಮೀನು ಇಲ್ಲದೆ ಇರತಕ್ಕ ಬಡ ಜನರಿಂದ ಜಮೀನನ್ನು ಬಿಡಿಸಿ ಓಡಿಸಿದ್ದ ಪಕ್ಷದಲ್ಲಿ ಮುಂದೆ ಅವರ ಜೀವಮಾನಕ್ಕೆ ಯಾವ ದಾರಿ ಇದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಆದ್ದರಿಂದ ಇಲ್ಲಿಯವರೆಗೆ ಕೊಟ್ಟಿರತಕ್ಕ ವನಗಳ ಜಮೀನನ್ನು ಬಿಟ್ಟು ಉಳಿದ ಎಲ್ಲಾ ಕಾಡು ಮತ್ತು ಅರಣ್ಯಗಳಲ್ಲಿ ಹೆಚ್ಚಿಗೆ ಜಮೀನು ಕೊಡದೇ ಇರುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಈಗಿರತಕ್ಕ ಅರಣ್ಯ ಏನಿದೆ ಅದನ್ನು ಸರ್ಕಾರದವರು ಉಳಿಸಿಕೊಳ್ಳುವುದು ಸಾಧುವಾದುದು ಎಂದು ನಾನು ಅಭಿಪ್ರಾಯಪಡುತ್ತೇನೆ.

Mr. SPEAKER.—Any arguments advanced should relate to the particular items of the Demand.

ಶ್ರೀ ಬಿ. ಟಿ. ಕೆಂಪರಾಜ್.—ಇದುವರೆಗೆ ಫಾರೆಸ್ಟ್‌ಗೆ ಸಂಬಂಧಪಟ್ಟ ಹಾಗೆ ಹೇಳಿದೆ.

Mr. SPEAKER.—Under 'Forest', the particular item relates to clearing jungles in the submerged areas. If you want lands in submerged areas, we have no objection.

ಶ್ರೀ ಬಿ. ಟಿ. ಕೆಂಪರಾಜ್.—ಸಿವಿಲ್ ವರ್ಕ್ಸ್ ವಿಚಾರವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. Public Works ಇಲಾಖೆಯು ಮಾಡತಕ್ಕ ಕಾಮಗಾರಿಗಳು ಚೆನ್ನಾಗಿ ಆಗುವುದಿಲ್ಲವೆಂದು ಪ್ರತಿಯೊಂದುಸಾರಿಯೂ ಈ ಸಭೆಯ ಮುಂದೆ ಅನೇಕ ಸೂಚನೆಗಳು ಬರುತ್ತಲೇ ಇವೆ. ಆದರೂ ಸಹ ಸರ್ಕಾರ ಏತಕ್ಕಾಗಿ ಇವರ ವಿಚಾರದಲ್ಲಿ ನಿಗಾ ಕೊಟ್ಟರೂ ಸಫಲವಾದ ರೀತಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ಸಾಧ್ಯವಾಗಿಲ್ಲ ಎಂದು ನನಗೆ ಅನುಮಾನವಾಗಿದೆ. ಯಾವುದಾದರೂ ಕಾಮಗಾರಿ

(ಶ್ರೀ ಬಿ. ಟಿ. ಕೆಂಪರಾಜ್.)

ಯನ್ನು ಅಂದಾಜು ಮಾಡುವುದಕ್ಕೆ ಮೊದಲು ಮಾಡಿದರೆ, ಆ ಅಂದಾಜು ತಯಾರಾಗುವುದಕ್ಕೆ ಸುಮಾರು ಆರು ತಿಂಗಳುಗಳು ಕನಿಷ್ಟಪಕ್ಷ ಆಗುತ್ತವೆ. ಕಾಮಗಾರಿಗಳ ಅಂದಾಜು ತಯಾರು ಮಾಡುವುದಕ್ಕೆ ಆರು ತಿಂಗಳುಗಳಾದರೆ ಕೆಲಸ ಪೂರೈಸಬೇಕಾದರೆ ಬಹಳ ವರ್ಷಗಳಾಗುತ್ತವೆ. ಕೇವಲ ಒಂದು ಸಣ್ಣ ಕೆರೆಯ ತೂಬನ್ನು ರಿಪೇರಿ ಮಾಡುವುದಕ್ಕೆ ಒಂದು ಅಂದಾಜನ್ನು ತಯಾರುಮಾಡಿ ಆಮೇಲೆ ಅದು ಮಂಜೂರಾತಿಗೆ ಹೋಗಿ tenders ಗಳನ್ನು ಕರೆದು ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಸುಮಾರು ಎರಡು ವರ್ಷಗಳಾದರೂ ಆಗುತ್ತವೆ. ಈರೀತಿ ಕೆಲಸಗಳು ಬಹಳ ನಿಧಾನವಾಗುವುದಾದರೆ ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದಷ್ಟು ಜಾಗ್ರತೆಯಾಗಿ ಕೆಲಸ ಆಗುವುದಕ್ಕೆ ಹೆಚ್ಚಿನ ಮುತುವರ್ಜಿಯಿಂದ ಕೆಲಸಗಳನ್ನು ನಿರ್ವಹಿಸಲು ಒಂದು ಸ್ಕೀಮನ್ನು ಹಾಕಿಕೊಳ್ಳತಕ್ಕುದು ಸೂಕ್ತ ಎಂಬ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಟ್ಟಿದ್ದೇನೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೆಲಸಗಳು ಆದಷ್ಟು ಜಾಗ್ರತೆಯಾಗಿ ಆಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹಾರೈಸಿ ಈ ಮಸೂದೆಯನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈಗ ಸರಕಾರದವರು ನಮ್ಮ ಮುಂದೆ ಮಂಡಿಸಿರುವ ಹೆಚ್ಚಿಗೆ ಬೇಡಿಕೆ ವಿಚಾರದಲ್ಲಿ ನಾನು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಈ ಅರಣ್ಯ ಇಲಾಖೆಯ ಕೆಲವು ನ್ಯೂನತೆಗಳು ಬಹಳ ದಿವಸಗಳಿಂದಲೂ ಹಾಗೆಯೇ ಉಳಿದು ಹೋಗಿವೆ. ಈ ಅರಣ್ಯ ಇಲಾಖೆಯು ಮರಗಳನ್ನು ಕಡಿಯುತಕ್ಕದ್ದು, ಇದ್ದಲಿಗೋಸ್ಕರ ಜಮೀನನ್ನು ಕೊಡತಕ್ಕದ್ದು ಇವನ್ನೆಲ್ಲಾ ತಪ್ಪಿಸಬೇಕು. ಅರಣ್ಯ ಸಂಪತ್ತು ಯಾವ ದೇಶದಲ್ಲಿ ನಾಶವಾಗುತ್ತದೋ ಆ ದೇಶದ ಜನಗಳ ಜೀವನ ಮಟ್ಟವು ನಾಶವಾಗುತ್ತದೆ ಎಂಬ ಅಂಶವನ್ನು ಈ ಸಭೆಯ ಮೂಲಕ ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಆ ಪದ್ಧತಿ ಇನ್ನೂ ಜಾರಿಯಲ್ಲಿದೆ. ಆದ್ದರಿಂದ ಅರಣ್ಯ ಇಲಾಖೆಯವರ ಗಮನಕ್ಕೆ ನಾನು ತರುವುದು, ಇದ್ದಲನ್ನು ಸುಡುವುದಕ್ಕೆ ಅವಕಾಶ ಕೊಡತಕ್ಕದ್ದು, acreage ಮೇಲೆ ಹಣವನ್ನು ಕೊಡತಕ್ಕದ್ದು ಸರಿಯಲ್ಲ. ಮರಗಳನ್ನು ಹಾಕಿ ಅರಣ್ಯ ಸಂಪತ್ತು ದಿನೇದಿನೇ ಅಭಿವೃದ್ಧಿಯಾಗುವುದಕ್ಕೆ ಅನುಕೂಲತೆಯನ್ನು ಕಲ್ಪಿಸಬೇಕು. ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಜಮೀನನ್ನೂ ಅನೇಕರು ಅನೇಕ ರೂಪದಲ್ಲಿ ಉಪಯೋಗಿಸಿಕೊಂಡು, ಒತ್ತುವರಿ ಮಾಡಿದ್ದಾರೆ. ಈ ವಿಚಾರವನ್ನು ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದರೂ, ಅರಣ್ಯ ಇಲಾಖೆಯವರು ಅವುಗಳನ್ನು ವಶಪಡಿಸಿಕೊಳ್ಳದೆ ಕಾಲಹರಣ ಮಾಡುತ್ತಿದ್ದಾರೆ. ಇದರ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕೆಂದು ಈ ಸಭೆಯ ಮೂಲಕ ತಿಳಿಸುತ್ತೇನೆ.

ವಿದ್ಯಾ ಇಲಾಖೆಯ ವಿಚಾರದಲ್ಲಿ ಬಹಳ ಉತ್ಸಾಹಕರವಾದ ವಿಚಾರವನ್ನು ಹೇಳಬೇಕೆಂದು ಮನಸ್ಸು ಮಾಡಿದ್ದೇನೆ. ಶ್ರೀ ಹುಚ್ಚೇಗೌಡರು ಭೂದಾನ ಸಂಬಂಧದಲ್ಲಿ ಅನಾವಶ್ಯಕವಾದ ಅನೇಕ ಜಮೀನುಗಳನ್ನು ಕೊಟ್ಟಿದ್ದಾರೆ ಎಂದು ಅಪ್ಪಣೆ ಕೊಡಿಸಿದರು. ನಾನು ಮಾತ್ರ ಅದನ್ನು ಒಪ್ಪುವುದಿಲ್ಲ. ಸಂಸ್ಥಾನದಲ್ಲಿ ಈ ಸರ್ಕಾರ ವಿದ್ಯಾದಾನಕ್ಕೋಸ್ಕರ ಭೂದಾನ ಬೇಕು, ಅದರಿಂದ ದೇಶದ ಪ್ರಗತಿ ಹೆಚ್ಚಾಗುತ್ತದೆ, ವಿದ್ಯಾಭ್ಯಾಸದ ಮಟ್ಟ ಹೆಚ್ಚಾಗುತ್ತದೆ ಮತ್ತು ಜೀವನಕ್ಕೆ ಅನುಕೂಲವಾಗುತ್ತದೆ ಎಂದು ಇಂತಹ ಒಂದು ಮುಖ್ಯ ಬೇಡಿಕೆಯನ್ನು ಜನರ ಮುಂದೆ ಇಟ್ಟಾಗ, ದೇಶದ ಜನರು ಉತ್ಸಾಹದಿಂದ ತಮ್ಮ ಜಮೀನುಗಳಲ್ಲಿ ಕೆಲವನ್ನು ಕೊಡುತ್ತಾ ಸಂತೋಷದಿಂದ ಸ್ವಾಗತಿಸಿದ್ದಾರೆ. ಮತ್ತೆ ಜಮೀನನ್ನು ಕೊಡುವಾಗಲೂ ಕೂಡ ಒಳ್ಳೆಯ ಜಮೀನನ್ನೇ ಕೊಟ್ಟಿದ್ದಾರೆ. ಅದನ್ನು ಉತ್ತಮಪಡಿಸಿ ಇದರಿಂದ ಉಂಟಾಗತಕ್ಕ ಫಲವನ್ನು ಮಕ್ಕಳಿಗೂ ಮತ್ತು ಅಧ್ಯಾಪಕರುಗಳಿಗೂ ಒದಗಿಸಬೇಕು ಎನ್ನುವುದು ಸ್ತೋತ್ರಾರ್ಹವಾದುದು. ಮತ್ತು ಇದನ್ನು ಈ ಸಭೆಯ ಮೂಲಕ ಸ್ವಾಗತಿಸುವುದು ನ್ಯಾಯವಾದುದು. ಶ್ರೀ ಹುಚ್ಚೇಗೌಡರು ಜಿಲ್ಲಾ ಬೋರ್ಡಿನಲ್ಲಿ ದಕ್ಷತೆಯಿಂದ ಕೆಲಸ ಮಾಡಿದಂಥ ಸೇವಕರು ಅವರು ಈ ಮಾತನ್ನು ಏತಕ್ಕೆ ಹೇಳಿದರು ಎಂಬುದನ್ನು ಮನಸ್ಸಿನಲ್ಲಿ ಯೋಚಿಸಿದರೆ ವ್ಯಸನವಾಗುತ್ತದೆ.

4 P.M.

ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಷಯ ಪ್ರಸ್ತಾಪಿಸಿ ಕೆಲವು ಮಾನ್ಯ ಸ್ನೇಹಿತರು ಅಲ್ಲಿ ಜಲ್ಲಿ ಜಮಾವಣೆಗೆ ಕೊಡತಕ್ಕ ರೇಟ್ ಬಹಳ ಅನ್ಯಾಯವೆಂದು ಹೇಳಿದರು. ಹತ್ತು ಮೈಲಿ ದೂರದಿಂದ ತರುವುದಕ್ಕೆ ಹೆಚ್ಚು ದರವನ್ನೂ ಎರಡೇ ಮೈಲಿಯಿಂದ ತರುವುದಕ್ಕೆ ತಕ್ಕಷ್ಟು ಕಡಮೆ ದರವನ್ನೂ ಕೊಡುವುದು ನ್ಯಾಯ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸಬ್ ಓವರ್ಸಿಯರ ಕೆಲಸದಿಂದ ಹಿಡಿದು ಚೀಫ್ ಇಂಜಿನಿಯರ ಕೆಲಸದ ವರೆಗೂ ಆಡಿಟ್ ಮಾಡುವ ವ್ಯವಸ್ಥೆಯನ್ನಿಟ್ಟು ಕೊಂಡಿದ್ದಾರೆ. ಈಚೆಗೆ ಈ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಬಹಳ ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ. ಸಂಚಾರಕ್ಕನುಕೂಲವಾಗುವ ಅನೇಕ ರಸ್ತೆಗಳನ್ನು ಮತ್ತು ಕೆರೆ ಕಟ್ಟೆಗಳನ್ನು ಮಾಡಿ ಸರ್ಕಾರದವರು ಒದಗಿಸಿರುವ ಹಣವನ್ನು ಖರ್ಚುಮಾಡಿ ಜನರಿಗೆ ಅನುಕೂಲ ಮಾಡಿರುವುದರಿಂದ ಈ ಹೆಚ್ಚಿನ ಬೇಡಿಕೆಯನ್ನು ಸರ್ಕಾರದವರು ಸಭೆಯ ಮುಂದಿಡುತ್ತಿದ್ದಾರೆ. ಇಂಥ ಕೆಲಸವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದ್ದಾರೆ. ಅವರ ದಕ್ಷತೆ ಹೆಚ್ಚಿದೆ ಇನ್ನೂ ಹೆಚ್ಚಬೇಕು ಎಂದು ಸರ್ಕಾರದವರಿಗೆ ತಿಳಿಸುತ್ತಾ ಅವರು ಮಾಡಿರುವ ಕೆಲಸ ಸ್ತೋತ್ರಾರ್ಹವಾಗಿದೆಯೆಂದು ಹೇಳುತ್ತೇನೆ. ಈಚೆಗೆ ಒಂದು ಸಾವಿರ ರೂಪಾಯಿನ ಕೆಲಸವನ್ನು ಕೂಡ ಟೆಂಡರ್ ಮೂಲಕ ಕೊಡಬೇಕೆಂಬ ನಿಯಮ ಮಾಡಿದ್ದಾರೆ. ಮೊದಲು ಈ ಪದ್ಧತಿ ಇರಲಿಲ್ಲ. ಈಚೆಗೆ ಸರ್ಕಾರದವರು ಗಮನಾರ್ಹವಾದ ಕೆಲಸ ಮಾಡಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ದೇಶಕ್ಕೆ ಹೆಚ್ಚಿನ ಸಹಕಾರ ಒದಗುತ್ತಿದೆಯೆಂಬುದು ಸಂತೋಷದ ಸಮಾಚಾರವೆಂದು ಹೇಳುತ್ತೇನೆ.

ಇನ್ನು ಕ್ಷಯದ ಆಸ್ಪತ್ರೆ ಮತ್ತು ಹುಚ್ಚಾಸ್ಪತ್ರೆ ವಿಷಯದಲ್ಲಿ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. . . .

ಅಧ್ಯಕ್ಷರು.—ಇದಕ್ಕೆ ಅದೆಲ್ಲ ಸಂಬಂಧಪಟ್ಟಿಲ್ಲ. ಇಲ್ಲಿ ಕ್ಷಯದ ಆಸ್ಪತ್ರೆಯೂ ಇಲ್ಲ ಬೇರೆ ರೋಗದ ಆಸ್ಪತ್ರೆಯೂ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಪಬ್ಲಿಕ್ ಹೆಲ್ತ್ ಎಂದಿದೆ ಇದರಲ್ಲಿ.

ಅಧ್ಯಕ್ಷರು.—ಇದರಲ್ಲಿ ಯಾವ ಯಾವ ವಿಷಯ ವಿದೆಯೋ ಅದರ ಮೇಲೆ ಮಾತ್ರ ಮಾತನಾಡಬೇಕು.

ಶ್ರೀ ಎಸ್. ಸಿದ್ದಪ್ಪ.—ಕೆಲವು ಆಸ್ಪತ್ರೆಗಳಲ್ಲಿ ಹೆಚ್ಚು ರೋಗಿಗಳನ್ನು ಸೇರಿಸಲು ಸ್ಥಳಾವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಸಂಸ್ಥಾನದಲ್ಲಿ ಗೋಮಾಳ ಮತ್ತು ಖರಾಬು ಜಮೀನುಗಳನ್ನು ಬಹಳ ಮಟ್ಟಿಗೆ ಜನರು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಈಗಿರತಕ್ಕ ಕಾನೂನಿನಿಂದ ಅವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ತಾಲ್ಲೂಕು ಅಧಿಕಾರಿಗಳಿಗೆ ಕಷ್ಟವಾಗಿದೆ. ಉದಾಹರಣೆಗೆ, ನಾನು ನಾಲ್ಕು ಎಕರೆ ಜಮೀನನ್ನು ಉತ್ತುಕೊಂಡರೆ ಅದನ್ನು ವಾಪಸು ತೆಗೆದುಕೊಳ್ಳುವುದಕ್ಕಾಗುವುಧಿಲ್ಲ. ಜುಲ್ಮಾನೆ ಹಾಕುತ್ತಾರೆ. ತಕರಾರು ತಃಖ್ತೆಯ ಮೇಲೆ ಈ ವರ್ಷ 20 ರೂಪಾಯಿ ಕೊಡುತ್ತೇನೆ, ಮುಂದಿನ ವರ್ಷ 40 ರೂಪಾಯಿ ಕೊಡುತ್ತೇನೆ. ಆಮೇಲೆ ಆ ಜಮೀನನ್ನು ನನಗೇ ಖಾಯಂ ಮಾಡಿ ಕೊಡಬೇಕೆಂದು ಕೇಳುತ್ತೇನೆ. ಈಗಿರತಕ್ಕ ಈ ಪದ್ಧತಿ ಅಥವಾ ವ್ಯವಸ್ಥೆಯನ್ನು ಉತ್ತಮಪಡಿಸಬೇಕು.

ಅಧ್ಯಕ್ಷರು.—ಈ ಮಸೂದೆಗೆ ಯಾವುದು ಸಂಬಂಧಪಟ್ಟಿದೆಯೋ ಆ ವಿಷಯದ ಮೇಲೆ ಮಾತ್ರ ಮಾತನಾಡಿ.

ಶ್ರೀ ಎಸ್. ಸಿದ್ದಪ್ಪ.—ನಾನೇನೂ ಸುಮ್ಮನೆ ಮಾತನಾಡುತ್ತಿಲ್ಲ. ನೋಟ್ ಮಾಡಿಕೊಂಡು ಬಂದಿದ್ದೇನೆ. ಆ ವಿಷಯಗಳನ್ನು ಕುರಿತು ಮಾತ್ರ ಮಾತನಾಡುತ್ತೇನೆ.

ಈಗ ಸಹಕಾರ ಮಂತ್ರಿಗಳಿದ್ದಾರೆ, ಅವರು ಗಮನಿಸಬೇಕು. ಬಳ್ಳಾರಿಯಲ್ಲಿ ಸಹಕಾರ ಶಿಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದೂ ಅದಕ್ಕೆ ಗ್ರಾಂಟು ಕೊಡಬೇಕೆಂದೂ ಕೇಳಿದ್ದಾರೆ. ಬೆಂಗಳೂರಿನಲ್ಲಿ ಇದನ್ನು ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವೆಂದು ಹೇಳುತ್ತಾರೆ. ಸಹಕಾರ ಮನೋಭಾವದ ಮೇಲೆ ನಡೆಯತಕ್ಕ ಪ್ರಜಾಪ್ರಭುತ್ವ ಇನ್ನೂ ಹೆಚ್ಚು ಬೆಳೆಯಬೇಕಾದರೆ, ಸಹಕಾರ ಶಾಖೆಯಲ್ಲಿರುವ ಕೆಲವು ನ್ಯೂನತೆಗಳನ್ನು ನಿವಾರಿಸಿ ಉತ್ತಮಪಡಿಸಬೇಕಾಗುತ್ತದೆ. ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಮರಿಯಪ್ಪನವರು ಮಲ್ಟಿಪರ್‌ಪಸ್ ಸಹಕಾರ ಸಂಘಗಳನ್ನು ಆಗಿನ ಕಾಲಕ್ಕನುಗುಣವಾಗಿ ವ್ಯವಸ್ಥೆ ಮಾಡಿದರು. ಇವಕ್ಕೆ ದೇಶದ ಎಲ್ಲ ಜನರಿಂದಲೂ ಹಣವನ್ನು ಪಡೆದಿದ್ದರು. ಆದರೆ ಇವು ಸರಿಯಾಗಿ ವ್ಯವಸ್ಥೆಗೊಳ್ಳದೆ ಮೂಲೆಗೆ ಬಿದ್ದು ಹೋಗಿವೆ. ಷೇರುದಾರರ ಹಣವನ್ನು ವಾಪಸು ಕೊಡುವುದಕ್ಕೆ ಆ ಸಂಘಗಳ ಸೆಕ್ರೆಟರಿಯವರೂ ಅಧಿಕಾರ ವರ್ಗದವರೂ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆಡಿಟ್‌ನವರು ಅದನ್ನು ವಸೂಲು ಮಾಡಬೇಕೆಂದರೆ ಡೆಪ್ಯುಟಿ ಕಮೀಷನರು ಸಹಕಾರ ಇಲಾಖೆಯವರ ಮೇಲೂ ಸಹಕಾರ ಇಲಾಖೆಯವರು ಡೆಪ್ಯುಟಿ ಕಮೀಷನರ ಮೇಲೂ ಹಾಕುತ್ತಿದ್ದಾರೆ. ಜನರ ಹಣದ ವಿಷಯದಲ್ಲಿ ಈ ರೀತಿ ಮಾಡುತ್ತಿದ್ದಾರೆ. ಸರ್ಕಾರದವರು ಇದನ್ನು ತೀವ್ರವಾಗಿ ಯೋಚನೆ ಮಾಡಿ, ಸಹಕಾರ ತತ್ವಕ್ಕೆ ಹೆಚ್ಚಿನ ರೂಪ ಕೊಟ್ಟು, ಸಹಕಾರದ ಕಡೆ ಜನರ ಮನಸ್ಸು ತಿರುಗುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಈಗ ಕಾಲಾವಕಾಶವಿಲ್ಲದೇಯಿರುವುದರಿಂದ ಬೇರೆ ಸಂದರ್ಭವನ್ನುಪಯೋಗಿಸಿಕೊಂಡು ಮಿಕ್ಕ ವಿಷಯದಲ್ಲಿ ಮಾತನಾಡುತ್ತೇನೆ. ಈಗ ನಾನು ಕೊಟ್ಟಿರುವ ಸಲಹೆಗಳನ್ನು ಮಾನ್ಯ ಮಾಡಿ ಗಮನ ಕೊಡಬೇಕು. ಪ್ರಜಾ ಸರ್ಕಾರ ಬಂದು ಎಂಟು ವರ್ಷವಾಯಿತು. ಅನೇಕ ಸಾರಿ ಈ ಸಭೆಯಲ್ಲಿ ಮನವಿ ಮಾಡಿಕೊಂಡಿದ್ದೇವೆ. ತಾಲ್ಲೂಕು ಅಧಿಕಾರ ವರ್ಗದವರು ತಾಲ್ಲೂಕಿನಲ್ಲಿ ಸಂಚಾರ ಮಾಡುವಾಗ ಜನರ ಬೇಡಿಕೆಗಳನ್ನೂ ಅರ್ಜಿಗಳನ್ನೂ ಗ್ರಾಮಾಂತರದಲ್ಲಿ ಅಲ್ಲೇ ತೆಗೆದುಕೊಂಡು ಹೋಗಿ ಸುಲಾವಣೆ ಮಾಡಿ, ತೀರ್ಮಾನವನ್ನು ಅಲ್ಲೇ ಕೊಡಬೇಕೆಂದು ಸರ್ಕಾರದವರಲ್ಲಿ ಹೇಳಿದ್ದೇವೆ. ಅದಕ್ಕೆ ಅವರೂ ಒಪ್ಪಿದ್ದಾರೆ. ಆದರೆ ಈ ಬಗ್ಗೆ ಇದುವರೆಗೂ ಸರ್ಕಾರಿ ಆಜ್ಞೆ ಬಂದಿಲ್ಲ. ಇದಕ್ಕೆ ಗಮನಕೊಟ್ಟು ಆಯಾ ತಾಲ್ಲೂಕಿನ ಜನರಿಂದ ಬಂದ ಅರ್ಜಿಗಳನ್ನು ಅಲ್ಲಲ್ಲೇ ಹೋಗಿ ಅಮಲ್ದಾರರುಗಳು ತಕ್ಕ ವ್ಯವಸ್ಥೆ ಮಾಡಿ, ತೀರ್ಮಾನ ಮಾಡಿ ಬಡಜನರಿಗೆ ಅನುಕೂಲ ಮಾಡಿದರೆ, ಈಗಿರುವ ಅನಾನುಕೂಲವನ್ನು ತಪ್ಪಿಸಿದರೆ ಆಗ ಪ್ರಜಾ ಸರ್ಕಾರ ಬಂದುದು ಸಾರ್ಥಕವಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಈ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಕಾರಣವೇನೆಂದರೆ, ಈ ಸಭೆಯಲ್ಲಿ ನಾವು ಸರ್ಕಾರದ ಆಡಳಿತದಲ್ಲಿ ದಕ್ಷತೆಯಿಲ್ಲ, ದಿನೇ ದಿನೇ ಕೀಳುದರ್ಜೆಗೆ ಇಳಿಯುತ್ತಿದೆ, ಸರ್ಕಾರ ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ರಾಜ್ಯಭಾರ ನಡೆಸುತ್ತಿಲ್ಲ, ಜನರ ಬೇಡಿಕೆಗಳು ಸಂಪೂರ್ಣವಾಗಿ ತೃಪ್ತಿ ಹೊಂದುತ್ತಿಲ್ಲವೆಂದು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದರೂ ಕೂಡ ಸರ್ಕಾರದವರು routine ಆಗಿ ಬಹುದಿನಗಳ ಹಿಂದೆ ನಡೆದುಕೊಂಡು ಬರುತ್ತಿದ್ದ ಕಂದಾಚಾರದ ಪದ್ಧತಿಯಂತೆಯೇ ನಡೆಸಿಕೊಂಡು ಬರುತ್ತಾ bureaucratic ವ್ಯವಸ್ಥೆಯನ್ನೇ ನಡೆಸಿಕೊಂಡು ಬರುತ್ತಿದ್ದಾರೆಯೇ ಹೊರತು ಹಿಂದೆ ಇವರು ಜನರಿಗೆ ವಾಗ್ದಾನ ಮಾಡಿದಂತೆ ಯಾವ ಅಧಿಕಾರಿಗಳಾಗಲಿ ಮಂತ್ರಿಗಳಾಗಲಿ ನಡೆದುಕೊಳ್ಳುವುದಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಶ್ರೀಮಾನ್ ಎಲ್. ಸಿದ್ದಪ್ಪನವರು ಒಂದು ವಿಷಯವನ್ನು ಹೇಳಿದರು. ಮಂತ್ರಿವರ್ಯರು ಗ್ರಾಮಾಂತರಗಳಿಗೆ ಪ್ರವಾಸ ಹೋದಾಗ ಗ್ರಾಮಗಳವರು ಅವರವರ ಬೇಡಿಕೆಗಳನ್ನು ಅರ್ಜಿಗಳ ಮೂಲಕ ಕೊಡುತ್ತಾರೆ. ಪ್ರಜಾಪ್ರಭುತ್ವ ಬಂದು ಏಳೆಂಟು ವರ್ಷಗಳಾದರೂ ಜನರು ನಮಗೆ ಅದು ಬೇಕು, ಇದು ಬೇಕು ಎಂದು ಬೇಡಿಕೆಗಳನ್ನು ಸಲ್ಲಿಸುವುದರಲ್ಲೇ ಇದ್ದಾರೆ. ಜನರಿಗೆ ಏನು ಬೇಕೆಂಬುದನ್ನು ಸರ್ಕಾರದವರು ನಿಜವಾಗಿಯೂ ಅರಿತಿಲ್ಲ. ಒಂದು ಸಾರಿ ಜನರು ಅರ್ಜಿ ಕೊಟ್ಟರೆ ಅರ್ಜಿ ಏನಾಗುತ್ತದೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಏಳೆಂಟು ವರ್ಷಗಳಾದರೂ ಆ ವಿಚಾರದ ಬಗ್ಗೆ ವರದಿ ತರಿಸಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಾರೆಯೆ ಎನ್ನುವುದು ಗೊತ್ತಾಗುವುದಿಲ್ಲ, ಸಂದೇಹಾಸ್ಪದವಾಗಿರುತ್ತದೆ ಒಂದು ವಿಷಯವನ್ನು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಜನರು ಕೊಟ್ಟ ಅರ್ಜಿಗಳನ್ನು ಒಂದು ಕೈಯಲ್ಲಿ ತೆಗೆದುಕೊಳ್ಳುತ್ತಾರೆ, ಇನ್ನೊಂದು ಕೈಯ್ಯಲ್ಲಿಟ್ಟು ಬಿಡುತ್ತಾರೆ ಅಥವಾ ವಾಪಸು ಕೊಟ್ಟು ಬಿಡುತ್ತಾರೆ.

ಅಧ್ಯಕ್ಷರು.—ತಾವು ಪಬ್ಲಿ ವರ್ಕ್ಸ್ ಮಂತ್ರಿಯವರ ವಿಷಯ ಹೇಳುತ್ತಿದ್ದೀರಾ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಎಲ್ಲರ ವಿಷಯವನ್ನೂ ಹೇಳುತ್ತಿದ್ದೇನೆ. ಕೊಡತಕ್ಕ ಅರ್ಜಿಗಳು ಏನಾಗುತ್ತವೆಯೋ ಎಂಬುದು ಇದುವರೆಗೂ ಗೊತ್ತಿಲ್ಲ. ಆದುದರಿಂದ ನನಗೆ ಈ ಸರ್ಕಾರದ ಆಡಳಿತ ವರ್ಗದಲ್ಲಿ ದಕ್ಷತೆ ಸಂಪೂರ್ಣವಾಗಿ ಕಂಡುಬರುತ್ತಿಲ್ಲ ಅವರನ್ನೇ ಅನುಸರಿಸಿಕೊಂಡು 'go with the wind' ಎನ್ನುವ ಹಾಗೆ ಅಧಿಕಾರಿಗಳು ಹೋಗುತ್ತಿದ್ದಾರೆ. ನನಗೆ ತಿಳಿದಿರುವ ಹಾಗೆ ಅನೇಕ ಅಧಿಕಾರಿಗಳು politicians ಆಗುತ್ತಿದ್ದಾರೆ. ಅನುಸರಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಅವರ ಕರ್ತವ್ಯ ಏನಿದೆ, ಯಾವ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ರೀತಿ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕೆಂಬುದನ್ನು ಅವರು ಅರಿತಿಲ್ಲವೆಂದು ಘಂಟಾಘೋಷವಾಗಿ ಹೇಳಬೇಕಾಗಿದೆ.

ಎರಡನೆಯದಾಗಿ ಮುಖ್ಯವಾದ ಫಾರೆಸ್ಟ್ ಇಲಾಖೆಯ ವಿಷಯ ಬಂದಿದೆ. ನಮ್ಮ ಫಾರೆಸ್ಟ್ ಮಂತ್ರಿಗಳು ಬಹಳ ಅನುಭವಶಾಲಿಗಳು, ಸಂಶೋಧನಾ ಕಾರ್ಯದಲ್ಲಿಯೂ ಘಟ್ಟಿಗರು. ಅವರು ಅಧಿಕಾರ ವಹಿಸಿ ಮೂರು ವರ್ಷವಾಯಿತು. ಅರಣ್ಯಗಳು ನಾಶವಾಗುತ್ತಿವೆ, ಹೊಸ ವಿಧಾನಗಳನ್ನನುಸರಿಸಿ ಅವನ್ನು ಅಭಿವೃದ್ಧಿಪಡಿಸುತ್ತಿಲ್ಲ, ಸರಿಯಾದ ಸಂಶೋಧನ ಕಾರ್ಯ ನಡೆಯುತ್ತಿಲ್ಲ ಎಂದು ಪದೇ ಪದೇ ಹೇಳುತ್ತಿದ್ದೇನೆ. ಏನೂ ಮಾಡಿಲ್ಲ. ರೀ ಸರ್ವೆ ಆಗಿ 50 ವರ್ಷವಾಗಿದೆ, ಈ ಹೊತ್ತಿನವರೆಗೂ ರೀ ಸರ್ವೆ ಆಗಿಲ್ಲ. ಆ ಇಲಾಖೆಯ ಆಡಳಿತವನ್ನು ಉತ್ತಮ ಪಡಿಸುವುದಕ್ಕೆ ಈ ಹೊತ್ತಿನವರೆಗೂ ಪ್ರಯತ್ನ ಮಾಡಿಲ್ಲವೆಂದು ಹೇಳಬೇಕಾಗಿದೆ.

Mr. SPEAKER.—The grant asked under 'Forests' relates only to particular items to which the Member may refer to.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅರಣ್ಯ ಸಂಪತ್ತು ದಿನ ದಿನಕ್ಕೆ ಕೃಶವಾಗುತ್ತಿದೆ. ಹೊಸದಾಗಿ ಮರಗಳನ್ನು ಬೆಳೆಯುವುದಕ್ಕೆ ಅವಕಾಶ ಸಿಕ್ಕಿಲ್ಲ. ಜಮೀನನ್ನು ದರಖಾಸ್ತು ಕೊಡುತ್ತಿದ್ದಾರೆ. ಆದರೆ ಹರಿಜನರು ದರಖಾಸ್ತು ಹಾಕಿದರೆ ಫಾರೆಸ್ಟಿನಲ್ಲಿ ಎರಡು ಮೂರು ಎಕರೆ ಕೂಡ ಸಿಕ್ಕುತ್ತಿಲ್ಲ. ಇದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಒತ್ತಿ ಒತ್ತಿ ಪದೇ ಪದೇ ತರುತ್ತಿದ್ದೇನೆ. ಇತರರಿಗೆ ಮೂವತ್ತು-ನಲವತ್ತೆಕರೆ ಸಿಕ್ಕಿದರೂ ಹರಿಜನರಿಗೆ ಸಿಕ್ಕುತ್ತಿಲ್ಲ.

ಇನ್ನೊಂದು, ವಿದ್ಯಾಭ್ಯಾಸದ ವಿಷಯ. ಎಷ್ಟೋ ಸಾರಿ ತಮ್ಮ ಗಮನಕ್ಕೆ ತಂದಿದ್ದೇವೆ, ಅನೇಕ ನಿರ್ಣಯಗಳನ್ನೂ ಪ್ರಶ್ನೆಗಳನ್ನೂ ತಂದಿದ್ದೇವೆ. ಹೈಸ್ಕೂಲುಗಳು, ಮಿಡ್ಲ್‌ಸ್ಕೂಲುಗಳು ಇವುಗಳ ವಿಚಾರದಲ್ಲಿ ಮೂರು ವರ್ಷದಿಂದ ಈ ಸಭೆಯಲ್ಲಿಯೂ ಹೊರಗೂ ಒತ್ತಿ ಒತ್ತಿ ಹೇಳುತ್ತಿದ್ದೇವೆ. ವೇತನಗಳನ್ನು ಸ್ವಲ್ಪವೂ, ಒಂದು ಕಾಸೂ ಹೆಚ್ಚಿಸಿಲ್ಲವೆಂದು ಹೇಳುತ್ತಿದ್ದರೂ ಇದಕ್ಕೆ ಗಮನ ಕೊಟ್ಟಿಲ್ಲ. ಆದಿ ಕರ್ಣಾಟಕರು ಮುಂದೆ ಬಂದಿದ್ದಾರೆ, ಒಂದು ಸಾಮಾನ್ಯ ನೀತಿಯನ್ನನುಸರಿಸಬೇಕೆಂದು ಹಾಕಿಕೊಂಡಿದ್ದೇವೆ ಎಂದು ನಮ್ಮನ್ನು ಕೂರಿಸುತ್ತಿದ್ದಾರೆಯೇ ಹೊರತು ಅವರು ಹೇಳುತ್ತಾರೆ, ಅದನ್ನು ಪರಿಶೀಲನೆಮಾಡೋಣ, ಎನ್ನುವುದಿಲ್ಲ. ಯೋಜನೆಯನ್ನು ಹಾಕಿಕೊಂಡು ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಿದ್ದರೂ ಮಾಡದೇ ಇರುವುದು ವಿಷಾದದ ಸಂಗತಿ. ಇದನ್ನು ಈಗಲಾದರೂ ಮಾನ್ಯಮಂತ್ರಿಗಳು ಗುರುತು ಹಚ್ಚಿಕೊಂಡು ಮುಖ್ಯಮಂತ್ರಿಗಳವರಿಗೆ ತಿಳಿಸುತ್ತಾರೆಂದು ನಂಬಿದ್ದೇನೆ.

ಇನ್ನು ಸಿವಿಲ್ ವರ್ಕ್ಸ್ ಮತ್ತು ಇರಿಗೇಷನ್ ವಿಚಾರ. ಇದು ಬಹಳ ಮುಖ್ಯವಾದುದು. ಕನ್ನಂಬಾಡಿ ಕಟ್ಟೆಯಲ್ಲಿನ ನೀರಿನ ಮಟ್ಟ ಈಗ ಕಡಮೆಯಾಗಿರುವುದು ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಅದಕ್ಕಾಗಿ ಈಗ ಕೆಲವು ದಿವಸಗಳಹಿಂದೆ 10-18 ಸಾವಿರ ಎಕರೆಗಳಿಗೆ ನೀರನ್ನು ಕೊಡಕೂಡದೆಂದು ಒಂದು ಹುಕುಂ ಮಾಡಿದರು. ಅದಕ್ಕೇನೋ ನಾವು ಒಪ್ಪಿದೆವು. ಆದರೆ ಈ 18,000 ಎಕರೆಗಳಲ್ಲಿ ಹಾಕಿದ್ದಂತಹ ನರ್ಸರಿ ಮತ್ತು ಹಸುರೆಲೆ ಗೊಬ್ಬರವನ್ನು ಯಾವ ರೀತಿ ವಿಲೇ ಮಾಡಬೇಕು, ಅದಕ್ಕೇನಾದರೂ immediate ರಿಲೀಫ್ ಒದಗಿಸಿಕೊಡಿರೆಂದು ನಾವು ಒತ್ತಾಯಪಡಿಸಿ ಕೇಳಿದಾಗ್ಯೂ ಸರ್ಕಾರದವರು ಗಮನವೇ ಕೊಡದಿರುವುದು ನ್ಯಾಯವೇ ? ಒಂದೇ ಒಂದು ಉದಾಹರಣೆ ಹೇಳುವುದಾದರೆ ಹೆಬ್ಬಳ್ಳಕ್ಕೆ ಅಡ್ಡಗಟ್ಟೆ ಹಾಕಿದರೆ 500 ಎಕರೆಗಳಿಗೆ ನೀರೊದಗುತ್ತದೆಂದು ಹೇಳಿ ಅದಕ್ಕೆ ಇಲಾಖೆಯವರು ಒಪ್ಪಿದ್ದರೂ, ಅದನ್ನು ಯಾರೋ ನಾನ್ ಕಾಂಗ್ರೆಸ್ ಪುಡಾರಿಗಳು ಕೊಟ್ಟ ಸಲಹೆಯೆಂದು ಹೇಳಿ ಆ ಸಲಹೆಯನ್ನು ನಿರಾಕರಿಸಿದ್ದು ಎಂಥ ಆಡಳಿತ ನೀತಿಯೋ ನನಗರ್ಥವಾಗುವುದಿಲ್ಲ. ಇದರಿಂದಾಗಿ 500 ಎಕರೆಗಳಿಗೆ ಬರಬಹುದಾದಂಥ ನೀರಿನ ಸರಬರಾಯಿ ತಪ್ಪಿಹೋಗಿ ರೈತರಿಗೆ ತೊಂದರೆಯಾಯಿತು.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಒಂದು ವಿಷಯವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಮಾನ್ಯ ಚಿಕ್ಕಲಿಂಗಯ್ಯನವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯಸದಸ್ಯರು ಅಪ್ರೋಪ್ರಿಯೇಷನ್ ಬಿಲ್ಲಿನಮೇಲೆ ಮಾತನಾಡದೆ ಏನೇನೋ general ಆಗಿ ಮಾತನಾಡುತ್ತಿದ್ದಾರೆ. ಅವರು ನಮ್ಮ ಮೈಸೂರು ಸರ್ಕಾರದ ಆಡಳಿತ ಬಹಳ ಕೆಳಮಟ್ಟಕ್ಕೆ ಇಳಿದಿದೆ ಎಂದು ಸರ್ಕಾರದವರ ಮೇಲೆ ಒಂದು ಆರೋಪಣೆ ಮಾಡಿದರು. ಎರಡನೆಯದಾಗಿ, ಅನೇಕ ಸ್ಥಳಗಳಲ್ಲಿ ಕೆರೆ ಕಾಮಗಾರಿಗಳನ್ನು ಮಾಡಿಕೊಡುವ ವಿಚಾರದಲ್ಲಿ ಮತ್ತು ಹೈಸ್ಕೂಲುಗಳನ್ನು ಏರ್ಪಡಿಸುವ ವಿಷಯದಲ್ಲಿ ಮತ್ತು ಇತರ amenities ಒದಗಿಸಿಕೊಡುವ ವಿಷಯದಲ್ಲಿ ಈಗಿರತಕ್ಕ ಆಡಳಿತ ವರ್ಗದವರು ಎಷ್ಟೇ ಅನುಕೂಲಗಳನ್ನು ಮಾಡಿಕೊಟ್ಟರೂ ತೃಪ್ತಿಕರವಾಗಿಲ್ಲವೆಂದರೆ ಇನ್ನೇನು ಹೇಳೋಣ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರು ನಮಗೆ ಕೊಟ್ಟಿರತಕ್ಕ ಅನುಕೂಲತೆಗಳ ವಿಚಾರದಲ್ಲಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. As a matter of right we are demanding and it is your duty to give. ಹಿಂದುಳಿದ ಜನಾಂಗವನ್ನು ಒಂದು ನಿರ್ದಿಷ್ಟ ಕಾಲದಲ್ಲಿ ಮುಂದಕ್ಕೆ ತರುವುದು ಸರ್ಕಾರದವರ ಕರ್ತವ್ಯ. ಅದನ್ನು ನೀವು ಮಾಡದೆ ಕರ್ತವ್ಯ ಲೋಪಮಾಡಿದ್ದೀರೆಂದು ನಾನು ನಿಮಗೆ ತಿಳಿಸಬಯಸುತ್ತೇನೆ.

ರೂರಲ್ ಡೆವಲಪ್‌ಮೆಂಟ್ ಬಾಬಿನಲ್ಲಿ removal of untouchability grant ಎಂದು ಒಂದು ಗ್ರಾಂಟನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕೆ ಅನುಗುಣವಾಗಿ ನಮ್ಮ ಸರ್ಕಾರದವರೂ ಕೊಟ್ಟಿದ್ದಾರೆ. ಈ ಗ್ರಾಂಟನ್ನು ಕೊಡುವುದರಲ್ಲಿ ನಿರ್ದಿಷ್ಟವಾಗಿ ಒಂದು condition ಇದೆ. ನಾವೆಷ್ಟು ಈ ಬಾಬಿಗೆ ಕೊಡುತ್ತೇವೆಯೋ ಅಷ್ಟನ್ನು ಇಂಡಿಯಾ ಸರ್ಕಾರದವರೂ ಕೊಡುವವರಾಗಿದ್ದಾರೆ. ಈಗ ಸಾಮಾನ್ಯವಾಗಿ ನಮಗೆ ಕಂಡುಬಂದಿರುವಂತೆ ಇವರು ಕೊಡತಕ್ಕ ಗ್ರಾಂಟು ಮಾರ್ಚಿ 25 ನೆಯ ತಾರೀಖಿನ ಹೊತ್ತಿಗೆ ಬರುತ್ತದೆ. ಮಾರ್ಚಿ 30ನೆಯ ತಾರೀಖಿಗೆ ಅದು ಲಾಪ್ಸ್ ಆಗಿಬಿಡುತ್ತದೆ. ಪ್ರತಿ ವರ್ಷವೂ ಅದು ಹೀಗೆಯೇ ಆಗುತ್ತದೆ. ಯಾವ ವರ್ಷವೂ ಇಂಡಿಯಾ ಸರ್ಕಾರದವರು ಕೊಡತಕ್ಕ ಹಣ ಸಂಪೂರ್ಣವಾಗಿ ಖರ್ಚಾಗುತ್ತಿಲ್ಲ. ತಾವೇ ಬೇಕಾದರೆ verify ಮಾಡಿನೋಡಿ. ಇದಕ್ಕಾಗಿ ತಾವು ಯಾವಾಗ ಬಡ್ಜೆಟ್ಟನ್ನು ಸ್ಯಾಂಕ್ಷನ್ ಮಾಡುತ್ತೀರೋ ಮೈಸೂರು ಸರ್ಕಾರದವರು ಏನು ಕೊಡಬೇಕೆಂದಿದ್ದಾರೆಂಬುದನ್ನು ನಿರ್ಧಾರಮಾಡಿ, ಅದಕ್ಕೆ ಇಂಡಿಯಾ

ಸರ್ಕಾರದವರು ಕೊಡತಕ್ಕದನ್ನೂ ಸೇರಿಸಿ ನಿರ್ದಿಷ್ಟವಾಗಿ ಒಂದು ಯೋಜನೆ ಹಾಕಿ ಬರುವ ಬಡ್ಜೆಟ್‌ವರ್ಷ ಪೂರ್ತಿಯಾಗುವುದರಲ್ಲಿ ಪೂರೈಸಬೇಕೆಂದು ಹೇಳುತ್ತೇನೆ. ಇಷ್ಟುಹೇಳಿ, ಈಗ ನಮ್ಮ ಮುಂದಿಟ್ಟಿರುವ ಬಾಬುಗಳ ವಿಷಯದಲ್ಲಿ ನಮಗೆ ಪೂರ್ತಿ ನಂಬಿಕೆಯಿಲ್ಲವೆಂದೂ, ಅದರಲ್ಲಿ ನಾವು ಯಾವ ಆಶೋತ್ತರಗಳನ್ನೂ ಕಾಣಲಾರೆವೆಂದೂ ಭಾವಿಸಿ ನಾನು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸಂಸ್ಥಾನದಲ್ಲಿ ಅರಣ್ಯ ಸಂಪತ್ತು ಹೆಚ್ಚಾಗಬೇಕು. ಆದರೆ ನಾವೀಗ ನೋಡುತ್ತಿರುವುದರಲ್ಲಿ, ಅದನ್ನು ಆದಷ್ಟು ಪ್ರಯತ್ನಪಟ್ಟು ಹೆಚ್ಚು ಮಾಡುವುದಕ್ಕೆ ಬದಲು ಕಾಡಿನಲ್ಲಿರತಕ್ಕ ಮರಗಳನ್ನು ಕೂಪುಗಳೆಂದು ಮಾಡಿ ಸೌದೆಗೂ ಇದ್ದಲಿಗೂ ಕಡಿಯುವುದಕ್ಕೆ ಅವಕಾಶಮಾಡಿದ್ದಾರೆ. ಅರಣ್ಯಗಳು ಈ ರೀತಿ ಕ್ಷೀಣಿಸುತ್ತಾ ಹೋದರೆ ಮಳೆ ಬೆಳೆಗಳು ಕಮ್ಮಿಯಾಗುತ್ತವೆ. ಈಗಾಗಲೇ ಅನೇಕ ಕಡೆಗಳಲ್ಲಿ ಮಳೆಯೇ ಬರುತ್ತಿಲ್ಲ. ಆದ್ದರಿಂದ ಎಲ್ಲಿ ಮಳೆಗಳು ಚೆನ್ನಾಗಿ ಬರುತ್ತಿಲ್ಲವೋ ಅಲ್ಲಿ ಕಾಡುಗಳನ್ನು ಕಡಿಯುವುದಕ್ಕೆ ಅವಕಾಶ ಕೊಡ ಕೂಡದೆಂದು ನಾನು ಸರ್ಕಾರದವರಿಗೆ ತಿಳಿಸಬಯಸುತ್ತೇನೆ. ಜೊತೆಗೆ, ಎಲ್ಲೆಲ್ಲಿ, ಶ್ರೀಗಂಧ, ತೇಗ ಇತ್ಯಾದಿ ಬೆಲೆಬಾಳುವ ಮರಗಳು ಬೆಳೆಯುತ್ತವೆಯೋ ಅಲ್ಲಲ್ಲಿ ಅವುಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕು. ಅಂಥ ಕಾಡುಗಳನ್ನೆಲ್ಲಾ ಕಡಿಸುವುದಕ್ಕೆ ಅವಕಾಶ ಕೊಟ್ಟು ವ್ಯವಸಾಯಕ್ಕೆ ಬಿಟ್ಟುಕೊಡುತ್ತಿರುದನ್ನು ಈ ಕೂಡಲೇ ತಡೆಗಟ್ಟಬೇಕೆಂದು ನಾನು ಮನವಿಮಾಡಿ ಕೊಳ್ಳುತ್ತೇನೆ.

ನಮ್ಮಲ್ಲಿ ಕೆಲವು ಅಮೃತಮಹಲ್ ಕಾವಲುಗಳಿವೆ. ಅವುಗಳಲ್ಲ ಹುಲ್ಲೂ ಸರಿಯಾಗಿ ಬೆಳೆಯುವುದಿಲ್ಲ. ಅಂಥ ಹುಲ್ಲು ಬೆಳೆಯದಿರುವ ಕಾವಲುಗಳನ್ನು ಆ ಇಲಾಖೆಯವರು ವ್ಯವಸಾಯಕ್ಕೆ ಕೊಡುವುದಕ್ಕೇನೂ ತೊಂದರೆಯಿಲ್ಲ. ರೈತರಿಗೆ ಇಂಥ ಜಮೀನುಗಳನ್ನು ಕೊಟ್ಟು ಅನುಕೂಲಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆಹಾರ ಹೆಚ್ಚಿಗೆ ಬೆಳೆಯಲು ಅನುಕೂಲವಾಗಲೆಂದು ಸರ್ಕಾರದವರು ಸಬ್ಸಿಡಿ ಬಾವಿಗಳ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಆದರೆ ಈಗ ತಾವು ಕೊಡುತ್ತಿರುವುದು 250 ರೂಪಾಯಿಗಳು ಮಾತ್ರ. ಈ ಹಣ ತೀರ ಕಡಮೆಯೆಂದು ರೈತರುಗಳು ವ್ಯಥೆಪಡುತ್ತಿದ್ದಾರೆ. ಒಂದು ಸಾವಿರ ರೂಪಾಯಿಗಳವರೆಗೂ ಕೊಡುತ್ತಿದ್ದರು. ಈಗಲೂ ಮೊದಲಿನಂತೆ ಸಬ್ಸಿಡಿಯನ್ನು ಹೆಚ್ಚುಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ನಮ್ಮ ಕಡೆ, ಗ್ರೋಮೋರ್‌ಫುಡ್‌ ಸ್ಕೀಮ್‌ ಪ್ರಕಾರ ವ್ಯವಸಾಯಕ್ಕೆ ಜಮೀನು ಪಡೆದಿದ್ದ ರೈತರಿಗೆ ಕೆಲವರಿಗೆ ಈಗ ತೊಂದರೆಯುಂಟಾಗಿದೆ. ಆ ಜಮೀನುಗಳನ್ನು ಪಡೆದವರು ಐದು ವರ್ಷಗಳ ಕಾಲ ಕಷ್ಟಪಟ್ಟು ಹಳ್ಳ ತಿಟ್ಟುಗಳನ್ನು ಸರಿಮಾಡಿಕೊಂಡು ಸಾಗುಮಾಡುತ್ತಿದ್ದರೆ, ಅವರು ಐದು ವರ್ಷವಾದಮೇಲೆ ತಮಗೇ ಖಾಯಂಮಾಡಿಕೊಡಬೇಕೆಂದು ಅರ್ಜಿ ಹಾಕಲಿಲ್ಲವೆಂದು ಹೇಳಿ, ಆ ಜಮೀನುಗಳನ್ನು ಅವರಿಗೆ ಖಾಯಂ ಮಾಡದೆ ವಾಪಸುಕೊಡಿರೆಂದು ಹೇಳಿ ಅನೇಕರಿಂದ ಕಿತ್ತುಕೊಳ್ಳುತ್ತಿದ್ದಾರೆ. ಇದರಿಂದಾಗಿ ರೈತರಿಗೆ ಬಹಳ ಅನ್ಯಾಯವಾಗಿದೆ. ದಯವಿಟ್ಟು ಘನ ಸರ್ಕಾರದವರು ಅವರ ಹಂಗಾಮಿ ಸಾಗುವಳಿ ಚೀಟಿ ರದ್ದುಮಾಡಿ ಖಾಯಂ ಸಾಗುವಳಿ ಚೀಟಿಯನ್ನು ದಯಪಾಲಿಸಿ ಆ ರೈತರ ಕಷ್ಟವನ್ನು ಪರಿಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—Now the Ministers will reply.

Dr. R. NAGAN GOWDA (Minister for Agriculture).—Mr. Speaker Sir, regarding the value of timber that is supplied to Vidhana Soudha and Hindustan Aircraft it is not correct to say that it was being given at a very low rate whereas the market rate is very high that is not borne out by facts, the market rate as it obtains in many places is not as high as the rate at which we are supplying timber to these institutions. I know a case recently where timber was purchased by a private body at Rs. 7-8-0 to Rs. 10 per cubic foot and so the rate that we are charging is not low.

Sri S. SRINIVASA IYENGAR.—Where was this, Sir?

Dr. R. NAGAN GOWDA.—This was supplied at the depot.

Supply of timber depends upon many things, its size, length and the quality and many other things. The rate at which we are supplying the timber is very good.

Then Sir, Sri Srinivasa Iyengar, of all people, was criticising about the money that we are spending on co-operative training. One of the means by which we could improve the working of the co-operative societies is by having trained men, Supervisors, Inspectors and also trained non-officials in co-operative work. A part of the money that we are spending comes as a subsidy from the Central Government. He was asking, I believe, how we are going to make use of all these trained men. Indeed, we have need for a lot of trained men and the way in which we are developing the co-operative movement it requires such a large number of trained personnel to carry on. He knows much better than anybody else that we have had to train a number of auditors hurriedly, for carrying on the work of audit work. So, I need not say anything more to justify the demand we have made for co-operative training.

(DR. R. NAGAN GOWDA.)

Then, there was another criticism made about Rs. 13 lakhs to be written off regarding the sale of manures and fertilizers. These are all transactions that took place very long while ago and the money that we are now writting off is really a book adjustment and the money has reached the cultivators. Fertilizers and manures were sold at concession rates. Some manure was sold at 50 per cent less than the normal price and some was sold at 25 per cent less. No more money was collected from the cultivators, and that therefore this concession has reached the cultivators directly.

Sri S. SRINIVASA IYENGAR.—On a point of information, Sir. If these bills were pending from a very long time, why were they kept unadjusted? The Hon'ble Minister must enlighten us on that issue.

Dr. R. NAGAN GOWDA.—Recently, we have had a mobile unit that went around to the various ranges and got these accounts. And these accounts are now being brought up-to-date and the Accountant-General has been asking us for making these adjustments.

Then, there was a question asked about the farming societies. Now at the time these farming co-operative societies were organised, loans were given to these societies. Later on in the year 1951, it was considered necessary to treat these loans as out-right grants. Some of these societies are difficult institutions to work. It was felt in the year 1951 that these moneys that we had given to them should be treated as grants. I have visited some of these societies, two of them are doing very good work. One of them is Aspathre Kaval Co-operative Society. There is another society at Gauribidanur which is also doing very good work. The members of this society are very happy and getting on very well. That society is confined mostly to the Harijans and it is a compliment to the members of this Society when I say that members of other communities including my own complained to me privately "What, Sir, they do not admit us as the members of the Society". I said "They are all working very well, and if you want some more societies, we will organise them later on." And so, the question of write off in these societies has been definitely undertaken by the Government long while ago, because they wanted to help these societies to get on in their co-operative farming work.

Sri B. HUTCHE GOWDA.—Why a sum of Rs. 62,000 was spent?

Dr. R. NAGAN GOWDA.—Rs. 62,000 was spent by a number of societies. They have used it for purchasing cattle, implements, for building their own sheds and for cultivation expenses.

4-30 P.M.

Some criticism was offered about the multipurpose societies. Some of these societies are now being looked into by the new auditors that have been appointed. I was very glad to note that one of the Hon'ble Members, when he was talking about this, said that he has been able to find the work of these auditors satisfactory.

Another member was suggesting that we should not allow personal influence to carry weight in sanctioning loans etc. in co-operative societies. Indeed, it is our duty to see that loans are given to members for proper purposes and then collected completely at the proper time.

Sri Kemparaj and also another member were mentioning about the lands that were given under 'grow more food' scheme for cultivation purposes. Sri Kemparaj said that some of these people have been driven out for not putting an application within five years. To my knowledge, whenever these things come to my notice, I have taken care to see that those who have been cultivating for a long time are not driven out. But I will find out about the particular societies that Sri Kemparaj had in mind.

Sri Kemparaj also suggested that the Public Works Department should carry on the work promptly. Of course, it is their intention all the while to carry on work promptly. But there are many things which cause delay. With the best of intentions these delays are caused.

Sri Solur Siddappa was suggesting that we should not cut forest trees and burn charcoal because this, he said, affects rainfall. The Forest Department has got a system by which they cut trees only in coupes that were selected by them. It is not in a pell-mell or haphazard way that forest trees are cut, or the coupes are selected. If the forest trees are cut and charcoal is burnt only in areas where the coupes are selected, there is no damage to the forest. The damage to our forest comes from illicit felling which we have been trying to avoid. Sri Chikkalingiah said that forests are being ruined day by day and he wanted improved administration in the Forest Department. We have been carrying on some afforestation work in forests. I am glad to say that under the Second Five-Year Plan we have taken a very ambitious scheme to grow trees in areas that have been denuded during the war time and since then. Again at the same time he said that land should be given at the rate of 2 acres per individual for cultivation purposes. Our forest area is not up to the mark; it is much below the international standard.

Sri M. CHIKKALINGAIYA.—One point for clarification. ನಾನು ಆ ರೀತಿಯಾಗಿ ಹೇಳಲಿಲ್ಲ. ಈ ಫಾರೆಸ್ಟ್ ಏರಿಯಾ ಅಲ್ಲದೆ ಇರುವ ಕಡೆ ಅನೇಕರಿಗೆ ಎಷ್ಟು ಜಮೀನು ಬೇಕಾದರೂ ಸಿಕ್ಕುತ್ತದೆ. ಜಮೀನಿಲ್ಲದಂಥವರಿಗೆ ಎರಡು ಎಕರೆ ಕೂಡ ಸಿಕ್ಕುತ್ತಿಲ್ಲವೆಂದು ಹೇಳಿದೆ. ಅಷ್ಟೇ ಹೊರತು ನಾನು ಎಲ್ಲರಿಗೂ ಎರಡು ಎಕರೆ ಜಮೀನು ಕೊಡಬೇಕೆಂದು ಕೇಳಲಿಲ್ಲ.

Dr. R. NAGAN GOWDA.—I stand corrected. Our friend Sri C. T. Hanumanthiah is always very anxious that forest should be well protected. I am glad he is anxious about that. He feels that forests are responsible for conserving moisture and are responsible for rainfall in an indirect way.

Mr. SPEAKER.—May I bring to the notice of the Hon'ble Minister that since there is no time, only the objections raised with regard to particular items of expenditure may be replied to?

Dr. R. NAGAN GOWDA.—That about covers matters which have been dealt with by the Hon'ble Members.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, ನಾನು ಕೇವಲ ಎರಡು ವಿಚಾರಗಳನ್ನು ಮಾತ್ರ ಸ್ವಲ್ಪ ವಿಶದವಾಗಿ ಹೇಳಿ ಬಾಕಿಯ ವಿಷಯಗಳನ್ನೆಲ್ಲಾ ಸೂಕ್ಷ್ಮವಾಗಿ ತಿಳಿಸಬೇಕೆಂದಿರುತ್ತೇನೆ. ಸ್ವಲ್ಪ ಹೆಚ್ಚಿಗೆ ತಿಳಿಸಬೇಕಾಗಿರುವ ಆ ಎರಡು ವಿಚಾರಗಳ ಪೈಕಿ ಒಂದನೆಯದು ನಮ್ಮ ಗಂಧದ ಕಾರ್ಖಾನೆಯ ವಿಚಾರ. ಎರಡನೆಯದು ಆ ಪೋರ್ಸಿಲೈನ್ ಫ್ಯಾಕ್ಟರಿ ವಿಷಯ.

ಈ ಗಂಧದ ಕಾರ್ಖಾನೆಯ ಆಡಳಿತ ಯಾವ ಒಂದು ಟೀಕೆಗೂ ಒಳಪಡಲು ಕಾರಣವೇ ಇಲ್ಲ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಒಂದು ರೀತಿಯ ಅಭಿಪ್ರಾಯಪಟ್ಟರು. ಮೈಸೂರು ಸರ್ಕಾರದವರು ಅಮೇರಿಕಾಕ್ಕೆ ಕಳುಹಿಸುವ ಗಂಧದ ಮರದಲ್ಲಿ ಅವರು ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆಯನ್ನು ತೆಗೆಯುತ್ತಿದ್ದಾರೆ, ಆದರೆ ಅಷ್ಟು ಪ್ರಮಾಣದ ಗಂಧದ ಮರದಿಂದ ಇಲ್ಲಿ ಕಡಮೆ ಪ್ರಮಾಣದ ಎಣ್ಣೆಯನ್ನು ತೆಗೆಯುತ್ತಿದ್ದೀರಿ, ಇದನ್ನು ನೋಡಿದರೆ ನಮ್ಮ ಯಂತ್ರ ಸಾಮಗ್ರಿಗಳಲ್ಲಿ ಏನೋ ತೊಂದರೆ ಇರಬಹುದೆಂಬ ಒಂದು ವಿಷಯವನ್ನು ಅವರು ಸರ್ಕಾರದವರ ಗಮನಕ್ಕೆ ತಂದಿರುತ್ತಾರೆ. ಹೀಗೆ ಅವರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯವು ಒಂದು ಸಲಹಾ ರೂಪವಾಗಿದ್ದರೂ ಇರಬಹುದು. ಆದರೆ ಇದರಲ್ಲಿರತಕ್ಕ ವಾಸ್ತವಾಂಶವೇನೆಂಬುದನ್ನು ನಾನೀಗ ತಿಳಿಸಿದರೆ ಅನುಕೂಲವಾಗುತ್ತದೆ. ನಾವು ವರ್ಷಂಪ್ರತಿ ಅಮೇರಿಕಾಕ್ಕೆ ಸುಮಾರು 300—400 ಟನ್ ಗಂಧದ ಮರವನ್ನು ಕಳುಹಿಸಿಕೊಡುತ್ತಿದ್ದೇವೆ. ಆದರೆ ನಾವೇನು ಇಲ್ಲಿ ಎಣ್ಣೆಗಾಗಿ ಉಪಯೋಗ ಮಾಡುತ್ತಿದ್ದೇವೋ ಅಂಥ ಮರಗಳನ್ನೇ ಈ ರೂಪದಲ್ಲೇ ಅಲ್ಲಿಗೆ ಕಳುಹಿಸುವುದಿಲ್ಲ. ನಾವು ಅಮೇರಿಕಾಕ್ಕೆ ಕಳುಹಿಸತಕ್ಕ ಮರದ ಖರ್ಚುವೆಚ್ಚಗಳು ಜಾಸ್ತಿಯಾಗಿ ಬಿಡುತ್ತವೆಂದು ಹೇಳಿ ಆ ಮರಗಳ ಮೇಲಿರತಕ್ಕಂಥ ಅನುಪಯೋಗವಾದ ಭಾಗವನ್ನೆಲ್ಲಾ ಕೆತ್ತಿ ಹಾಕಿ ಕೇವಲ ಮಧ್ಯದಲ್ಲಿರತಕ್ಕಂಥ ಕಚ್ಚಾದ ಭಾಗವನ್ನು ಅಂದರೆ ಸೇಗಾಗಿರುವಂಥ ಭಾಗವನ್ನು ಮಾತ್ರವೇ ಅಲ್ಲಿಗೆ ಕಳುಹಿಸುತ್ತಿದ್ದೇವೆ. ಹೀಗೆ ಮಾಡದೆ ಹೋದರೆ ನಾವು ಅಲ್ಲಿಗೆ ರವಾನೆ ಮಾಡತಕ್ಕ ಗಂಧದ ಮರದ ಖರ್ಚುಗಳೇ ಜಾಸ್ತಿ ಆಗಿ ಅದರಿಂದ ಬರುವ ಉತ್ಪತ್ತಿ ಕಡಮೆಯಾಗುತ್ತದೆ. ಈ ಸಂದರ್ಭದಲ್ಲಿ ಹಾಗೆ ಖರ್ಚುವೆಚ್ಚಗಳು ಮರವನ್ನು ಅಲ್ಲಿಗೆ ಕಳುಹಿಸುವುದರಿಂದ ಜಾಸ್ತಿಯಾಗುವುದರಿಂದ ಅದಕ್ಕೆ ಬದಲಾಗಿ ಇಲ್ಲೇ ಎಣ್ಣೆಯನ್ನು ತೆಗೆದು, ಆ ಎಣ್ಣೆಯನ್ನೇ ಏಕೆ ಅಲ್ಲಿಗೆ ರವಾನೆ ಮಾಡಬಾರದೆಂದು ತಾವು ಪ್ರಶ್ನೆ ಹಾಕಬಹುದು. ಹಾಗೆ ನಾವು ಎಣ್ಣೆಯನ್ನು ತೆಗೆದು ಕಳುಹಿಸಿದಾಗ್ಲೂ ಅವರು ಹೆಚ್ಚಿನ ಟ್ಯಾಕ್ಸ್‌ಗಳನ್ನು ಹಾಕಿಬಿಡುತ್ತಾರೆ. ಆಗಲೂ ನಮಗೆ ಗಿಟ್ಟುವುದಿಲ್ಲ. ಆದಕಾರಣ ಈಗ ನಾವು ಕೈಗೊಂಡಿರತಕ್ಕ ವಿಧಾನವೇ ಸರ್ವಶ್ರೇಷ್ಠವಾದದ್ದಾಗಿದೆ. ನಾವು ಅಲ್ಲಿ ವರ್ಷಂಪ್ರತಿ ಎಷ್ಟು ಗಂಧದ ಎಣ್ಣೆಯು ಮಾರಾಟವಾಗಬಹುದೆಂಬುದನ್ನು ಅಂದಾಜು ಮಾಡಿಕೊಂಡು ಅಷ್ಟಕ್ಕೆ ಸರಿಹೋಗುವಂತೆ ಗಂಧದ ಮರದ ಸೇಗನ್ನು ಆಗಿಂದಾಗ್ಗೆ ಅಲ್ಲಿಗೆ ರವಾನೆ ಮಾಡುತ್ತಿದ್ದೇವೆ. ಈ ರೀತಿಯ ಒಪ್ಪಂದ ಮಾಡಿಕೊಂಡಿರುವುದರಿಂದ ನಾವು ಕಳುಹಿಸತಕ್ಕ ಗಂಧದ ಮರಕ್ಕೆ ಬೀಳುವ ಛಾರ್ಜನ್ನು ಅವರು ವಜಾ ಮಾಡಿಕೊಂಡು ಅಂದರೆ ಅಲ್ಲಿ ಮಾರಾಟವಾಗತಕ್ಕ ಈ ಎಣ್ಣೆಯ ಮೊಬಲಗಿನಲ್ಲಿ ಅದನ್ನು ವಜಾ ಮಾಡಿಕ್ಕೊಂಡು ಹೆಚ್ಚಿಗೆ ಉಳಿದ ಮೊಬಲಗನ್ನು ನಮಗೆ ಅವರು ಕಳುಹಿಸಿಕೊಡುತ್ತಿದ್ದಾರೆ. ಆದುದರಿಂದ ಅವರ ಈ ಒಂದು ಆಕ್ಷೇಪಣೆಯ ಉದ್ದೇಶ ಒಳ್ಳೆಯದೇ ಆಗಿದ್ದರೂ, ಅಂಥ ಆಕ್ಷೇಪಣೆಗೆ ಕಾರಣವಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನಾನು ಆಕ್ಷೇಪಣಾ ರೂಪವಾಗಿ ಹೇಳಲಿಲ್ಲ. ಈಗ ಇರತಕ್ಕ ನಲಿಕರಣೆಯನ್ನು ಬದಲಾಯಿಸುವುದರಿಂದ ಹೆಚ್ಚಿಗೆ ಎಣ್ಣೆ ಬರುವುದಕ್ಕೆ ಸಾಧ್ಯವಿದೆ. ಅದಕ್ಕೆ ಸರಕಾರದವರು ಗಮನ ಕೊಡಬೇಕೆಂದು ಹೇಳಿದೆ. ಸರ್ಕಾರದವರು ಗಮನಕೊಡುತ್ತೇವೆಂದು ಹೇಳಿದರೆ ಸಾಕು. ಇರತಕ್ಕ ವಿಧಾನವನ್ನು ಉತ್ತಮಪಡಿಸಿ ಎಂದು ಹೇಳಿದ್ದೇನೇ ವಿನಾ ಯಾವ ವಿಧವಾದ ಆಕ್ಷೇಪಣೆಯನ್ನೂ ಎತ್ತಲಿಲ್ಲ.

Sri H. M. CHANNABASAPPA.—I am grateful for that suggestion. ಒಂದು ವೇಳೆ ವಾಸ್ತವಾಂಶ ಆಗಿದ್ದ ಪಕ್ಷದಲ್ಲಿ ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೆ ವಾಸ್ತವಾಂಶ ಈ ರೀತಿಯಾಗಿರುವುದರಿಂದ ನಾನು ಹೇಳಿರುವುದು ಅವರಿಗೆ ಒಪ್ಪಿಗೆಯಾಗುತ್ತದೆಂದು ತಿಳಿದಿದ್ದೇನೆ. 21 ಲಕ್ಷ 30 ಸಾವಿರ ರೂಪಾಯಿಗಳ ಹೆಚ್ಚಿಗೆ ಬೇಡಿಕೆಯನ್ನು ಈ ಭಾಗದಲ್ಲಿ ಕೇಳಿರುವುದಕ್ಕೆ ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ಇದುವರೆಗೆ ಎರಡು ಕಾರ್ಖಾನೆಗಳು ಎಷ್ಟು ಪ್ರಮಾಣದಲ್ಲಿ ಕೆಲಸ ಮಾಡಬೇಕೋ ಅಷ್ಟು ಪ್ರಮಾಣದಲ್ಲಿ ಮಾಡುತ್ತಾ ಇಲ್ಲ ಎಂದು ನಾನು ಹಿಂದೆ ಹೇಳಿಕೆ ಕೊಟ್ಟಿದ್ದೆ. ಎರಡು ಸಾವಿರ ಟನ್ ಮರವನ್ನು consume ಮಾಡಿ ಈ ಕಾರ್ಖಾನೆಗಳಿಂದ ಎಣ್ಣೆ ತೆಗೆಯಬಹುದು. ಆದರೆ ಗಂಧದ ಮರದ ಸರಬರಾಯಿ ಸಮರ್ಪಕವಾಗಿ ಆಗದೆ ಇರುವ ಕಾರಣದಿಂದ ಒಂದು ಸಾವಿರ ಟನ್‌ನಿಂದ ಸಾವಿರದ ಮುನ್ನೂರು ಟನ್‌ಗಳವರೆಗೆ ಮಾತ್ರ consume ಮಾಡುತ್ತಿದ್ದರು. ಆದ್ದರಿಂದ ಯಾವ ಪ್ರಮಾಣದಲ್ಲಿ ಈ ಕಾರ್ಖಾನೆಗಳಲ್ಲಿ ಕೆಲಸಮಾಡಬೇಕೋ ಅಷ್ಟು ಪ್ರಮಾಣದವರೆಗೆ ಕೆಲಸ ಮಾಡಿ ಅಲ್ಲಿ production step up ಮಾಡಬೇಕು ಎಂಬ ಉದ್ದೇಶದಿಂದ ಫಾರೆಸ್ಟ್ ಇಲಾಖೆಯವರಿಗೆ ಬರೆದು ಅದಕ್ಕೆ ಬೇಕಾದ ಗಂಧದ ಮರವನ್ನು ಒದಗಿಸುವ ವ್ಯವಸ್ಥೆ ಮಾಡಿದ್ದಾರೆ. ಈಗ 42 ರೂಪಾಯಿಗಳಿಂದ 55 ರೂಪಾಯಿಗಳವರೆಗೆ ಗಂಧದ ಎಣ್ಣೆ ಬೆಲೆ ಹೆಚ್ಚುತ್ತಿರುವುದರಿಂದ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ನಮ್ಮ ಕಾರ್ಖಾನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆಯನ್ನು ತೆಗೆಯಿಸಿ ಫಾಯಿದೆ ಬರಬೇಕು ಎನ್ನುವ ಉದ್ದೇಶದಿಂದ ವ್ಯವಸ್ಥೆ ಮಾಡಿದೆ. ಈಗ 1,700 ರಿಂದ 1,800 ಟನ್‌ಗಳವರೆಗೆ ಎರಡು ಗಂಧದ ಕಾರ್ಖಾನೆಗಳಿಂದ ಎಣ್ಣೆಯನ್ನು ತೆಗೆಯುವ ವ್ಯವಸ್ಥೆ ಮಾಡಿದೆ. ಒಂದು ಟನ್‌ಗೆ 2,600 ರೂಪಾಯಿಗಳಂತೆ ಫಾರೆಸ್ಟ್ ಇಲಾಖೆಗೆ ಕೊಡುತ್ತಿದ್ದಾರೆ. ಇದನ್ನು arbitrary ಆಗಿ ನಿಗದಿ ಮಾಡಿಲ್ಲ. ಕೇಂದ್ರ ಸರ್ಕಾರದ Chief Cost Accountant ರವರು ಇದನ್ನು ನಿಗದಿ ಮಾಡಿದ್ದಾರೆ. ಗಂಧದ ಎಣ್ಣೆಯ ಬೆಲೆ ಹೆಚಿದ್ದರಿಂದ ಇದನ್ನು ಮೂರು ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬಹುದೆಂದು 700-800 ಟನ್‌ಗಳನ್ನು ಒದಗಿಸುವುದಕ್ಕೆ ಎಷ್ಟು ಹಣ ಬೇಕೊ ಅಷ್ಟನ್ನೂ ಇಲ್ಲಿ ಒದಗಿಸಿಕೊಂಡಿದ್ದಾರೆ. 1,700 ಟನ್‌ಗಳನ್ನು ಮೂರು ಸಾವಿರ ರೂಪಾಯಿನಂತೆ ಕೊಂಡುಕೊಳ್ಳಬೇಕಾದರೆ 55 ಲಕ್ಷ ರೂಪಾಯಿಗಳು ಬೇಕು. ಇತರ ಖರ್ಚು ಬಾಬಿಗೋಸ್ಕರವಾಗಿ ಮತ್ತು ಹೆಚ್ಚುಮಾಡಿದುದರ ಉತ್ಪನ್ನಕ್ಕೋಸ್ಕರ 56 ಲಕ್ಷ ರೂಪಾಯಿಗಳು ಬೇಕು. ಇದರಲ್ಲಿ ಈ ಸಾಲಿನಲ್ಲಿ ಒದಗಿಸಿರುವ 34 ಲಕ್ಷ ಚಿಲ್ಲರೆ ಹಣವನ್ನು ಕಳೆದರೆ 21 ಲಕ್ಷದ 30 ಸಾವಿರ ರೂಪಾಯಿಗಳು ಹೆಚ್ಚಿಗೆ ಬೇಕಾಗುತ್ತವೆ. ಆದ್ದರಿಂದ ಈ ಹೆಚ್ಚಿಗೆ ಬೇಡಿಕೆಯನ್ನು ಕೇಳಿರುವುದು ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆಯನ್ನು ತೆಗೆದು ಹೆಚ್ಚಿನ ಪ್ರಮಾಣದಲ್ಲಿ ದೇಶಕ್ಕೆ ಆದಾಯವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ. ನೀವು ಕೊಡತಕ್ಕ ಹಣ ಹೆಚ್ಚಿಗೆ ಗಂಧದ ಎಣ್ಣೆಯನ್ನು ಮಾರಾಟಮಾಡಿ ಹೆಚ್ಚಿಗೆ ಲಾಭಪಡೆಯುವುದಕ್ಕೆ ಸಹಾಯವಾಗುವುದರಿಂದ ಇದಕ್ಕೆ ತಮ್ಮೆಲ್ಲರ ಸಹಾನುಭೂತಿ ಇದೆಯೆಂದೂ ಮತ್ತು ಇದನ್ನು ತಾವು ಕೊಡುತ್ತೀರೆಂದೂ ನಂಬಿದ್ದೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕಳೆದ ವರ್ಷ ಈ ಬಾಬಿನಲ್ಲಿ ಎಷ್ಟು ಹಣ lapse ಆಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಎಷ್ಟು ಪ್ರಮಾಣದಲ್ಲಿ ಗಂಧದ ಮರಗಳನ್ನು ಉಪಯೋಗಿಸುತ್ತಿದ್ದರೋ ಅಷ್ಟೇ ಪ್ರಮಾಣದಲ್ಲಿ ಅದನ್ನು ಒದಗಿಸುತ್ತಿದ್ದರು. ಹೆಚ್ಚಿಗೆ ಒದಗಿಸುತ್ತಿರಲಿಲ್ಲ. ತಾವು ಕೇಳತಕ್ಕ ಅಂಕಿ ಈಗ ನನ್ನ ಮುಂದೆ ಇಲ್ಲ. ಅದನ್ನು ಆಮೇಲೆ ಮಾನ್ಯಸದಸ್ಯರಿಗೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಮಾನ್ಯ ಶ್ರೀ ಗೋಪಾಲಗೌಡರು ಈ ವಿಷಯದಲ್ಲಿ ಮಾತನಾಡುತ್ತಾ ಕೈಗಾರಿಕಾ ಸಚಿವರು " ಮೊದಲು ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈಗ ಏತಕ್ಕೋ ಸ್ವಲ್ಪ ಮೆತ್ತಗೆ ಆಗಿದ್ದಾರೆ " ಎಂದು ಹೇಳಿದರು. ಉತ್ಸಾಹದಿಂದ ಕೆಲಸಮಾಡಿದುದರ ಪರಿಣಾಮ ಹೆಚ್ಚಿಗೆ ಗಂಧದ ಎಣ್ಣೆಯನ್ನು ತೆಗೆಯುವುದು. ಇದಕ್ಕಾಗಿ ಹೆಚ್ಚಿನ ಬೇಡಿಕೆ ತಮ್ಮ ಮುಂದೆ ಬಂದಿದೆ. ಆದ್ದರಿಂದ ಉತ್ಸಾಹ ಕಡಿಮೆಯಾಗಿಲ್ಲ. ಮಾತಿನಲ್ಲಿ ಉತ್ಸಾಹ ಕಡಿಮೆಯಾದರೂ ಕಾರ್ಯದಲ್ಲಿ ಉತ್ಸಾಹ ಹೆಚ್ಚಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಮತ್ತೆ ಪೋರ್ಸಲೇನ್ ಫ್ಯಾಕ್ಟರಿ ವಿಷಯದಲ್ಲಿ ಮಾನ್ಯ ಗೋಪಾಲಗೌಡರು ಕೆಲವು ಅಂಶಗಳನ್ನು ನನ್ನ ಗಮನಕ್ಕೆ ತಂದರು. ನಮ್ಮ ಉದ್ದೇಶವಾದರೂ ಈ ಕೈಗಾರಿಕೆಗಳಿಂದ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಜನೋಪಯುಕ್ತವಾದ ಪದಾರ್ಥಗಳನ್ನು ತಯಾರು ಮಾಡಿ ನಮ್ಮ ದೇಶಕ್ಕೆ ಹೆಚ್ಚಿಗೆ ಆದಾಯ ಬರಬೇಕೆಂಬುದೇ ಆಗಿದೆ. ಈ ವಿಷಯದಲ್ಲಿ ಏನು ಟೀಕೆ ಟಿಪ್ಪಣಿಗಳು ಬಂದರೂ ಅದನ್ನು ಸದಭಿಪ್ರಾಯದಿಂದ ಹೊರಗೆಡವುತ್ತಾ ಇದ್ದಾರೆಂದು ನಂಬಿದ್ದೇನೆ. ಈ ಕೆಲಸ ನಮ್ಮದು, ತಮ್ಮದು ಮತ್ತು ಎಲ್ಲರದೂ ಆಗಿದೆ. ಈ ಪೋರ್ಸಲೇನ್ ಫ್ಯಾಕ್ಟರಿಗೆ 63 ಲಕ್ಷ ರೂಪಾಯಿಗಳ ಅಂದಾಜು 1954 ನೇ ಇಸವಿಯಲ್ಲಿ ಮಂಜೂರು ಆಯಿತು, 1954-55ನೇ ಇಸವಿಯಲ್ಲೂ ನಾವು 37 ಲಕ್ಷ ರೂಪಾಯಿಗಳನ್ನು ಒದಗಿಸಿದೆವು. ಈ 37 ಲಕ್ಷ ರೂಪಾಯಿಗಳಲ್ಲಿ 11 ಲಕ್ಷದ 41 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿ ಇನ್ನೂ 25 ಲಕ್ಷದ 59 ಸಾವಿರ ರೂಪಾಯಿಗಳು lapse ಆಯಿತು. ಇದು ಏನು ಕಾರಣದಿಂದ lapse ಆಯಿತು, ಇದನ್ನು ಏತಕ್ಕೋಸ್ಕರ ಖರ್ಚುಮಾಡಲಿಲ್ಲ ಎಂದು ಪ್ರಶ್ನೆಮಾಡುವುದು ವಾಸ್ತವ. ನಾವು ನಿರ್ದಿಷ್ಟವಾದ ಕಾಲದಲ್ಲಿ ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಬೇಕು ಎಂದು ಯೋಜನೆ ಮಾಡಿದ ಮೇಲೆ ಏತಕ್ಕೋಸ್ಕರ ಆ ರೀತಿ ಪ್ರಗತಿಯನ್ನು ಸಾಧಿಸಲಾಗಲಿಲ್ಲ ಎಂಬ ಬಗ್ಗೆ ಸರ್ಕಾರದವರು ತೃಪ್ತಿಕರವಾದ ಜವಾಬನ್ನು ಕೊಡಬೇಕಾದುದು ಅವಶ್ಯಕ. ನಮ್ಮ ಉದ್ದೇಶ ಮುಂದೆ ಬರುವ ಡಿಸೆಂಬರ್ ತಿಂಗಳಲ್ಲಿ ಪೋರ್ಸಲೇನ್ ಫ್ಯಾಕ್ಟರಿಯ ಕೆಲಸಕಾರ್ಯಗಳು ಮುಗಿದು ಅದು ಉತ್ಪನ್ನಕ್ಕೆ ಬರಬೇಕು ಎಂಬುದಾಗಿತ್ತು. 25 ಲಕ್ಷ 59 ಸಾವಿರ ರೂಪಾಯಿಗಳು ಏತ

ಕ್ಕೋಸ್ಕರ ಖರ್ಚಾಗಲಿಲ್ಲ ಎಂದರೆ ಈ ಕಾರ್ಖಾನೆಗೆ ಬೇಕಾದ ಮೆಷಿನರಿಯು ಜಪಾನಿನಿಂದ ಬರಬೇಕಾಗಿತ್ತು. ಇದಕ್ಕೆ ಹಣವನ್ನೊದಗಿಸಿ letter of credit ಕೊಡಲಾಗಿತ್ತು. ಆದರೆ shipment ಬರತಕ್ಕದ್ದು ನಿಧಾನವಾದ ಕಾರಣದಿಂದ ಹೋದವರುಷ ಬರಬೇಕಾದ ಮೆಷಿನರಿಯು ಇನ್ನೂ ಬರುವುದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ನಾನಾ ಕಾರಣಗಳಿವೆ. ಅವುಗಳು ಏನೆಂದು ಮಾನ್ಯ ಸದಸ್ಯರು ಕೇಳಿದರೆ ಅವನ್ನು ಅಲಾಯಿದ ತಿಳಿಸುತ್ತೇನೆ. ಮೆಷಿನರಿ ಈ ಸಾಲಿನಲ್ಲಿ ಬಂತು. ಹೋದವರುಷ ಒದಗಿಸಿದ ಹಣದಲ್ಲಿ 11 ಲಕ್ಷದ 41 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದ್ದವು. ಈ ವರುಷ ಮೆಷಿನರಿ ಎಲ್ಲಾ ಸಂಪೂರ್ಣವಾಗಿ ಬಂದು ಡಿಸೆಂಬರ್ ತಿಂಗಳಲ್ಲಿ ಪೋರ್ಸಲೇನ್ ಫ್ಯಾಕ್ಟರಿ ಉತ್ಪನ್ನಕ್ಕೆ ಪ್ರಾರಂಭಿಸಬೇಕು ಎನ್ನುವ ನಿರ್ಧಾರ ಮಾಡಿದ್ದರಪ್ರಯುಕ್ತ ಹೋದ ವರ್ಷ ಖರ್ಚು ಮಾಡಬೇಕಾದ ಮೊಬಲಗನ್ನು ಈ ವರ್ಷ ಖರ್ಚು ಮಾಡಬೇಕಾಗಿದೆ. 63 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ 11 ಲಕ್ಷದ 41 ಸಾವಿರ ರೂಪಾಯಿಗಳು ಹೋದವರ್ಷ ಖರ್ಚಾಗಿವೆ. ಈಗ ಉಳಿಕೆ 51 ಲಕ್ಷದ 59 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕದ್ದು 37 ಲಕ್ಷ ರೂಪಾಯಿಗಳು. 51.59 ಲಕ್ಷ ರೂಪಾಯಿಗಳಲ್ಲಿ 37 ಲಕ್ಷ ರೂಪಾಯಿಗಳನ್ನು ಕಳೆದರೆ 14 ಲಕ್ಷದ 59 ಸಾವಿರ ರೂಪಾಯಿಗಳು ನಮಗೆ ಹೆಚ್ಚಿಗೆ ಬೇಕಾಗಿದೆ. ಅದರಿಂದ ಈಗ 15 ಲಕ್ಷ ರೂಪಾಯಿಗಳ ಹೆಚ್ಚಿಗೆ ಬೇಡಿಕೆಯನ್ನು ತಮ್ಮ ಮುಂದೆ ತಂದಿದ್ದೇವೆ. ಇದು ಅಂಕಿಅಂಶಗಳ ವಿವರ. ಈ ವಿವರಣೆಯಿಂದ ಈ ವಿಷಯದಲ್ಲಿ ತಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ಪೋರ್ಸಲೇನ್ ಫ್ಯಾಕ್ಟರಿ ವಿಷಯವಾಗಿ ಇನ್ನು ಕೆಲವು ಅಂಶಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದು ಸಮರ್ಪಕವಾಗಿ ನಡೆಯುತ್ತಾ ಇಲ್ಲ, ಅಲ್ಲಿ ತಯಾರುಮಾಡತಕ್ಕ ಪದಾರ್ಥಗಳ ಬೆಲೆ ಹೆಚ್ಚಾಗಿದೆ ಮತ್ತು quality ಕಡಿಮೆಯಾಗಿದೆ, ಇದನ್ನು ಉತ್ತಮಪಡಿಸತಕ್ಕದ್ದು ಅವಶ್ಯಕ ಎಂಬುದಾಗಿ ಹೇಳಿದ್ದಾರೆ. ನಮ್ಮ ಕಾರ್ಖಾನೆಗಳಲ್ಲಿ ತಯಾರಿಸಿದ ಪದಾರ್ಥಗಳ ಬೆಲೆ ಇಳಿಯಬೇಕು, ಕಡಿಮೆ ಬೆಲೆಯಲ್ಲಿ ಉತ್ತಮ ಪದಾರ್ಥಗಳನ್ನು ತಯಾರಿಸಿ ಹೆಚ್ಚಿನ ಲಾಭ ಬರುವಂತೆ ಮಾಡಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಲೋಪದೋಷಗಳು ಏನೆಂಬುದನ್ನು ಸರ್ಕಾರದ ಗಮನಕ್ಕೆ ತಂದ ಪಕ್ಷದಲ್ಲಿ ಅವುಗಳನ್ನು ನಿವಾರಿಸಿ ಉತ್ತಮಪಡಿಸಬೇಕೆಂಬ ವಿಚಾರದಲ್ಲಿ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇಲ್ಲಿ ತಯಾರುಮಾಡತಕ್ಕ ಪದಾರ್ಥಗಳು ಏನೆಂದರೆ ಕ್ರಾಕರಿ, low tension ಮತ್ತು high tension ಇನ್ಸುಲೇಟರ್ಸ್. ನಾವು ತಯಾರುಮಾಡತಕ್ಕ ಇನ್ಸುಲೇಟರ್ಸ್ ವಿಚಾರದಲ್ಲಿ ದೇಶಾದ್ಯಂತ ಎಲ್ಲಿಯೂ ಕೂಡ ಯಾವ ವಿಧವಾದಂಥ complaint ಇದೆ? ಇಷ್ಟೇ ಅಲ್ಲದೆ ನಾವು ತಯಾರುಮಾಡತಕ್ಕ low tension ಮತ್ತು high tension ಇನ್ಸ್ಯುಲೇಟರ್ಸ್‌ಗೆ ಹೆಚ್ಚಿನ ಪ್ರಾಧಾನ್ಯತೆ ಮತ್ತು ಬೆಲೆಯೂ ಇಲ್ಲ. ಇದರ ಕ್ರಯ ಹೆಚ್ಚು ಎಂಬುದು ನಿಜ. ಇದನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ ಮತ್ತು ಇನ್ನೂ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ high tension ಮತ್ತು low tension ಇನ್ಸುಲೇಟರ್ಸ್‌ನ್ನು ಮಾಡಬೇಕು ಎನ್ನುವ ಉದ್ದೇಶದಿಂದ N.G.K. ಯವರೊಡನೆ collaborate ಮಾಡಿ ಹೊಸ ಉದ್ಯಮ ಕೈಗೊಂಡಿದ್ದಾರೆ. ಕ್ರಾಕರಿ quality ಮತ್ತು cost ಎರಡನ್ನೂ ಉತ್ತಮಪಡಿಸಬೇಕೆಂಬ ಅಭಿಪ್ರಾಯ ಸಾಧುವಾದದ್ದು. ಈಗ ಇರತಕ್ಕ ಪರಿಸ್ಥಿತಿಯಲ್ಲಿ ನಮ್ಮ ಪದಾರ್ಥಗಳು ತಾವು ಹೇಳುವಷ್ಟು ಮತ್ತು ತಿಳಿದುಕೊಂಡಿರುವಷ್ಟು ಕನಿಷ್ಠವಾಗಿಲ್ಲ ಎಂದು ಹೇಳಿದರೆ ತಾವು ಒಪ್ಪುತ್ತೀರೆಂದು ತಿಳಿದುಕೊಂಡಿದ್ದೇನೆ. ಏಕೆಂದರೆ, ಈಗ ನಮ್ಮ ಕಾರ್ಖಾನೆಯಲ್ಲಿ ತಯಾರು ಮಾಡುವ ಪದಾರ್ಥಗಳು ಬೆಂಗಾಲ್ ಪಾಟರೀಸ್‌ನವರು ತಯಾರುಮಾಡುವ ಪದಾರ್ಥಗಳ ಜೊತೆಗೆ ಭಾರತಾದ್ಯಂತವೂ ಉಪಯೋಗವಾಗುತ್ತಿವೆ. ಬೆಂಗಾಲ್ ಪಾಟರೀಸ್‌ನ ಸೋಲ್ ಏಜೆಂಟರು ನಮ್ಮಲ್ಲಿ ತಯಾರಾಗತಕ್ಕ ಪದಾರ್ಥಗಳನ್ನು ನಮಗೆ ಲಾಭದಾಯಕವಾಗುವ ದರದಲ್ಲಿ ಕೊಂಡುಕೊಳ್ಳುವುದಕ್ಕೆ ಏಜೆನ್ಸಿಯನ್ನು ತೆಗೆದುಕೊಂಡಿದ್ದಾರೆ. ಅವರು ಬೆಂಗಾಲ್ ಪಾಟರೀಸ್‌ನ ಏಜೆನ್ಸಿಯನ್ನು ಇಟ್ಟುಕೊಂಡಿದ್ದಾರೆ. ಹಾಗೆ ನಮ್ಮ ಕಾರ್ಖಾನೆಯ ಪದಾರ್ಥಗಳನ್ನು ಭಾರತಾದ್ಯಂತ ಮಾರಾಟ ಮಾಡುವುದಕ್ಕೆ ಏಜೆನ್ಸಿ ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿರುವುದು ದೇಶದಲ್ಲಿ ಜನರು ನಮ್ಮ ಕಾರ್ಖಾನೆಯ ಸಾಮಾನುಗಳನ್ನು ಅಪ್ಯಾನಿಸುತ್ತಾರೆಂಬುದನ್ನು ವ್ಯಕ್ತಪಡಿಸುತ್ತವೆ. ಅಂದಮಾತ್ರಕ್ಕೇ ಇನ್ನೂ ಉತ್ತಮಪಡಿಸಬಾರದೆಂದಲ್ಲ. ತಮ್ಮ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಇನ್ನೂ ಕಡಮೆ ಬೆಲೆಯಲ್ಲಿ ಮತ್ತು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮ ರೀತಿಯಲ್ಲಿ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಾರ್ಖಾನೆಯನ್ನು ನಾನು ಹೋಗಿ ನೋಡಬೇಕು, ಅಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಹೇಳಿದರು. ನಾನು ನೋಡಿದ್ದೇನೆ, ವಿಷಯಗಳನ್ನು ತಿಳಿದುಕೊಂಡಿದ್ದೇನೆ. ತಾವು ಹೇಳಿದ ಲೋಪದೋಷಗಳಿದ್ದರೆ, ಅವುಗಳನ್ನು ಗಮನಕ್ಕೆ ತಂದರೆ ಅವುಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವಾಗಲೂ ಸಿದ್ಧ. ಕಟ್ಟಡ ಕಟ್ಟುವುದು ಏಕೆ ತಡವಾಯಿತು ಎಂಬ ವಿಷಯ ಬಂತು. ಇದಕ್ಕೆ ಅಗತ್ಯವಾದ ಕಬ್ಬಿಣ ಮತ್ತು ಉಕ್ಕು ಸರಿಯಾದ ಕಾಲದಲ್ಲಿ ಬಾರದೇಯಿದ್ದ ಕಾರಣದಿಂದ 18-19 ಲಕ್ಷ ರೂಪಾಯಿನ ಕಟ್ಟಡ ನಿಧಾನವಾಗಿದೆ. ಈಗ ಅದು ಸರಬರಾಯಿ ಆಗಿರುವುದರಿಂದ ಬೇಗ ಮಾಡುತ್ತೇವೆಂದು ಭರವಸೆ ಕೊಡಬಲ್ಲೆ. ಕಟ್ಟಡ ಪೂರ್ತಿಯಾಗುವವರೆಗೂ ಯಂತ್ರಗಳನ್ನು ಹಾಗೆಯೇ ಇಟ್ಟುಕೊಂಡಿರಬಾರದೆಂದು ಕಟ್ಟಡ ನಡೆಯುತ್ತಿರುವಾಗಲೇ plant fix ಮಾಡಿ ಡಿಸೆಂಬರ್‌ನಲ್ಲಿ ತಮ್ಮ ನಿರೀಕ್ಷಣೆಗನುಗುಣವಾಗಿ ಕೆಲಸಕ್ಕೆ ಬರುವಹಾಗೆ ಈ ಹೊಸ ಉದ್ಯಮ ಪೂರ್ತಿಯಾಗಿ ಇದರಿಂದ ದೇಶಕ್ಕೆ ಹೆಚ್ಚಿನ ಪ್ರಮಾಣದ ಉತ್ಪತ್ತಿಯಾಗುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ಆದುದರಿಂದ ಸರ್ಕಾರದವರು ಏನು ಬೇಡಿಕೆಯನ್ನಿಟ್ಟಿದ್ದಾರೋ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri K. HANUMANTHAIYA (Chief Minister).--Sir, though the Hon'ble Leader of the Opposition has not this time come to my rescue, I need not speak much. He was very doubtful if the pattern of education that we are devising would work successfully. I have spoken about the subject when

(SRI K. HANUMANTHAIYA.)

I moved the Supplementary Demands. I have spoken on many other platforms and so have my Hon'ble friends of this House. The scheme is intended to make education self-supporting to the extent possible and to instil ideas of self-reliance among the students and the teachers. The scheme has been described by Sri Gopala Gowda as good. It is one of the schemes that has been placed before the country by the Father of the Nation for implementation. So far as this House is concerned, it has given its approval in various forms during the previous years. What is being done today is merely another step taken in the right direction in the real sense of Basic Education. We have to work this system with faith. If we go on entertaining doubts and picking holes, it will never be possible to implement this scheme. Gandhiji was aware that "This scheme meant an unchartered sea to those who had to work it. There is no complete precedent before it. If the idea is sound it will work itself in practice. After all it is for those who have faith in the self-supporting part of the scheme to demonstrate it by working in schools in accordance with this idea. Ultimately it is the right type of men with the required faith that will make the scheme a success." I would appeal to Hon'ble Members of this House to cultivate that amount of faith in this pattern of education which it deserves and which it needs. I have already said that school committees will be formed to manage lands and other things attached to every school. We have also entrusted this work to the Rural Development Committees that have been constituted. Those Committees consist of the members of the Legislature and important people of the area. Those representatives of the people will have to supervise the working of the system from time to time and give it the necessary advice and assistance and wherever it is necessary correct it. I am sure, Sir, that, if we work with that faith, this scheme will not only succeed but it will turn out a new generation of educated men who will be creators and not imitators as we are today. I do not know whether the Leader of the Opposition was serious when he said that we must use force in order to collect lands. If we did that, probably he would be the very first person to protest against any such course. It is the voluntary offer that will ultimately redound to the credit of not only Government but all of us. It is unthinkable that we can use force to implement any idea in this country.

SRI J. MOHAMED IMAM.—I do not think that I used the word force. Perhaps I have used the word influence.

SRI K. HANUMANTHAIYA.—I am glad that he is withdrawing it. He made out a very good point that officers, *i.e.*, Government servants should not take part in this land gift movement.

Sir, I have often said that after the achievement of independence, the service of the country is a common heritage of all of us, whether they are in Government service or whether in Opposition or whether on the Treasury Benches. Yesterday, I felt happy when I saw that whenever there is a question of national importance, everyone of us act up to the call of the country. This is one such question. This is not a party question; this is not a non-official question; everyone who is concerned in serving the country sincerely and effectively has to implement it. Besides, when Government decides upon a policy with the approval of the House, it is the duty of every Government servant to implement it. If they do it on their own accord, then the question will be different. If they do it under the directions of the Government, there cannot be any objection to it. After all the teachers and the professors of the Education Department . . . .

5 P.M.

MR. SPEAKER.—The time is over. The question is :

> "That the Mysore Appropriation (No. 4) Bill, 1955, be taken into consideration."

The motion was adopted.

Mr. SPEAKER.—Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is :

"That the Schedule stand part of the Bill."

The motion was adopted.

The Schedule was added the Bill.

Mr. SPEAKER.—Clause 1, Title and Preamble.

The question is :

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri K. HANUMANTHAIYA.—Sir, I beg to move :

"That the Mysore Appropriation (No. 4) Bill, 1955, be passed."

Mr. SPEAKER.—The question is :

"That the Mysore Appropriation (No. 4) Bill, 1955, be passed."

The motion was adopted.

Mr. SPEAKER.—The House will now rise and meet at 12 Noon tomorrow.

The House then adjourned at Five of the Clock to meet again at Twelve of the Clock on Wednesday, the 19th October 1955.